ದೆಹಲಿ ಕರ್ನಾಟಕ ಸಂಘದ

# ಅಭಿಮತ

ಇಪ್ಪತ್ತರ ಹೊಸ್ತಿಲಲ್ಲಿ

ಸೆಪ್ಟೆಂಬರ್ 2010
ಬೆಲೆ ರೂ. 1.



## ದೆಹಲಿಯಲ್ಲಿ
### ಕನ್ನಡಿಗರ ಕೃಷ್ಣ

# Every City is My City!

with

**KBL**
**_Multi Branch Banking_**

Operate your account across the country

**KBL**
**_Multi City Cheque_**

Reach your account from anywhere in the country




Karnataka Bank Ltd.
Your Family Bank. Across India.

Regd. & Head Office: Mangalore - 575 002

E-mail: info@ktkbank.com Visit us at: www.karnatakabank.com

**ಪ್ರಧಾನ ಸಂಪಾದಕರು**
ವಸಂತ ಶೆಟ್ಟಿ ಬೆಳ್ಳಾರೆ

**ಸಂಪಾದಕ ಮಂಡಳ**
ಮಹಾಬಲೇಶ್ವರ ಭಟ್ ಕೆ.
ಸಂತೋಷ್ ಕುಮಾರ್ ಉಪಾಧ್ಯಾಯ
ಡಾ. ಸುಮಂಗಲಾದೇವಿ
ನಂದಿನಿ ಮಲ್ಯ
ಸಾಮ್ರಾಟ್ ಗೌಡ
ಸರೋಜಾ ವಿಜಯಕುಮಾರ್

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**
ಸಿ.ವಿ. ಗೋಪಿನಾಥ್

**ಉಪಾಧ್ಯಕ್ಷರು**
ವಸಂತ ಶೆಟ್ಟಿ ಬೆಳ್ಳಾರೆ
ಉಷಾ ಭರತಾದ್ರಿ

**ಪ್ರಧಾನ ಕಾರ್ಯದರ್ಶಿ**
ಆರ್. ರೇಣುಕುಮಾರ್

**ಖಜಾಂಚಿ**
ಎಂ.ವಿ. ವೆಂಕಟೇಶ್

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ಡಾ. ಹೇಮಲತಾ ಮೂರ್ತಿ

**ಸಮಿತಿ ಸದಸ್ಯರು**
ಅಂಜನಿ ಗೌಡ
ಹರಿಶ್ಚಂದ್ರ ಬಂಟ್ವಾಳ್
ಟಿ.ಎಂ. ಮೈಲಾರಪ್ಪ
ವಿ.ವಿ. ಬಿರಾದಾರ
ಸಿ.ಆರ್. ಶ್ರೀನಿವಾಸ
ಕೆ.ಎಸ್.ಜಿ. ಶೆಟ್ಟಿ
ರಾಧಾಕೃಷ್ಣ
ಭಂಡಾರ್‌ಕರ್ ಎಸ್.ಎಲ್
ಇಸ್ಮಾಯಿಲ್ ಬುಡಂದಿ
ಬಿ.ಆರ್.ಮಹಾಲಿಂಗಪ್ಪ

**DELHI KARNATAKA SANGHA**
Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com

ಅಭಿಮತ
**ಸಂಪುಟ 20 ಸಂಚಿಕೆ 11**
**ಸೆಪ್ಟೆಂಬರ್ 2010, ಬೆಲೆ ರೂ. 1**

# ನಿಮ್ಮೊಂದಿಗೆ

ಎಂಬತ್ತರ ದಶಕವನ್ನು ಹಿಂದಿರುಗಿ ನೋಡಿದಾಗ ಸಂಘದ ಕಟ್ಟಡದಲ್ಲಿ ಕೆನರಾ ಬ್ಯಾಂಕ್ ಹಾಗೂ ಅದರ ಹಿಂಬದಿ ಹುಟ್ಟದಾದ ಕ್ಯಾಂಟೀನ್ ಇತ್ತು. ಆದರೆ ಸ್ಥಳೀಯರಿಗೆ ಸಂಘದ ಬಗ್ಗೆ ತಿಳಿದೇ ಇರಲಿಲ್ಲ ಎನ್ನಬಹುದು. ಸ್ಥಳೀಯರಿಗೆ ದೆಹಲಿ ಕರ್ನಾಟಕ ಸಂಘ ಎಂದರೆ 'ಜಿಸ್‌ಮೇ ಸೌತ್ ಇಂಡಿಯನ್ ಕ್ಯಾಂಟೀನ್ ಹೈನಾ ಓಹೀ ಹೈ ಕ್ಯಾ' ಎನ್ನುತ್ತಿದ್ದರು. ಇಂದಿಗೂ ಕೂಡ ಹಾಗೆಯೇ ಇದೆ ಎಂದರೆ ಅತಿಶಯೋಕ್ತಿಯಾಗಲಾರದು. ಸಂಘ ಸ್ಥಳೀಯವಾಗಿ ಇನ್ನೂ ಕೂಡಾ ಚಿರಪರಿಚಿತವಾಗಬೇಕು. ಅಂದೂ ಕೂಡ ಯಾವುದೇ ನಾಮಫಲಕವಿಲ್ಲದೆ ಕ್ಯಾಂಟೀನ್‌ನಲ್ಲಿ ಜನ 'ಕ್ಯೂ' ನಿಲ್ಲುತ್ತಿದ್ದರು.

ಕ್ಯಾಂಟೀನ್‌ನಲ್ಲಿ ದೇವರ ಪೂಜೆಗೆ ಇಟ್ಟ ತೆಂಗಿನಕಾಯಿ ಮೊಳಕೆಯೊಡೆದು ಸಸಿಯಾದಾಗ ಅದನ್ನು ಕ್ಯಾಂಟೀನ್‌ನ ಹೊರಗೆ ನೆಟ್ಟು ಪೋಷಿಸಿ ಬೆಳೆಸಲಾಯಿತು. ಅದು ಬೆಳೆಯುತ್ತಾ ಬಂದ ಹಾಗೆ ನಮ್ಮೂರಿನ ತೆಂಗಿನ ಗಿಡವೆಂದು ನಮಗೆಲ್ಲಾ ಅತೀ ಆನಂದ. ಅದರ ಬೇಕುಗಳನ್ನು ಅರಿತು ದೆಹಲಿಯ ಹವಾಮಾನಕ್ಕೆ ಹೊಂದಿಕೊಂಡು ಸಸಿಯನ್ನು ಬೆಳೆಸುವುದಕ್ಕಿಂತಲೂ ಉಳಿಸುವುದಕ್ಕೆ ಶ್ರಮಪಟ್ಟವರು ಶ್ರೀ ಷರೀಫ್. ಸಂಘದ ಹೊಸ ಕಟ್ಟಡ ಬರುವಾಗ ಆ ಕಲ್ಪವೃಕ್ಷವನ್ನು ಉಳಿಸಿಕೊಳ್ಳಲಾರದ ವೇದನೆ ಇಂದಿಗೂ ಅವರದು.

ಸಂಘದಲ್ಲಿ ಸಿಬ್ಬಂದಿ ಇಲ್ಲದಿದ್ದಾಗ ಬರುವ ಅತಿಥಿಗಳನ್ನು ಆತ್ಮೀಯವಾಗಿ ಮಾತನಾಡಿಸಿ, ಅವರಿಗೆ ದೆಹಲಿಯ ಬಗ್ಗೆ, ಇರುವ ವ್ಯವಸ್ಥೆಗಳ ಬಗ್ಗೆ ಮಾರ್ಗದರ್ಶನ ಮಾಡಿ, ಉಪಚರಿಸಿ ಕಳುಹಿಸಿಕೊಡುವ ಈ ಷರೀಫರಿಂದ ನಾವುಗಳು, ಸಿಬ್ಬಂದಿಗಳು ಅತಿಥಿಗಳನ್ನು ನೋಡಿಕೊಳ್ಳುವ ವಿಧಾನವನ್ನು ಕಲಿಯಬೇಕು. ಇತ್ತೀಚೆಗೆ ಸಂಘದ ಸಭಾಂಗಣವನ್ನು ಬಾಡಿಗೆಗೆ ಪಡೆದು ಸ್ಥಳೀಯ ಸಂಸ್ಥೆಯೊಂದು ಕಾರ್ಯಕ್ರಮವನ್ನು ಆಯೋಜಿಸಿತ್ತು. ಹೊರಗಡೆ ಕುಡುಕರ ಗುಂಪೊಂದು ದಾಂಧಲೆ ನಡೆಸುತ್ತಿದ್ದುದನ್ನು ಕಂಡು ಸ್ವತಃ ಷರೀಫ್ ಅವರು ಕಟ್ಟಡದ ಬಾಗಿಲಲ್ಲಿ ನಿಂತು ಯಾರನ್ನೂ ಒಳಗೆ ಬಿಡಲಿಲ್ಲ. ಸಂಘದೊಂದಿಗೆ ಸ್ಪಂದಿಸುವ ಎಲ್ಲರಿಗೂ ಈ ಷರೀಫರ ಕಾಳಜಿ ಇದ್ದರೆ....

ಷರೀಫ್ ಅವರನ್ನು ಎರಡು ದಶಕದಿಂದ ನಾನು ಬಲ್ಲೆನಾದರೂ ಅವರ ಪೂರ್ತಿ ಹೆಸರು ಇಂದಿಗೂ ನನಗೆ ತಿಳಿದಿಲ್ಲ. ದೆಹಲಿ ಕನ್ನಡಿಗರಿಗೆ ಚಿರಪರಿಚಿತರಾದ ಷರೀಫರ ಬಗ್ಗೆ ಬರೆದ ಉದ್ದೇಶ ಇಷ್ಟೇ. ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಗಣೇಶ ಮಿತ್ರ ಮಂಡಳಿ ಗಣೇಶ ಉತ್ಸವವನ್ನು ಆಚರಿಸಿಕೊಂಡು ಬರುತ್ತಿದೆ. ಈ ಗಣೇಶ ಮಿತ್ರ ಮಂಡಳಿಗೆ ಬಹಳ ವರ್ಷಗಳಿಂದ ಷರೀಫ್ ಅವರೇ ಅಧ್ಯಕ್ಷರು. ಈ ಯುವಕ ಎಷ್ಟೇ ಕಷ್ಟವಾದರೂ ಪ್ರತಿ ವರ್ಷ ಸಂಘದ ಆವರಣದಲ್ಲಿ ಗಣೇಶ ಉತ್ಸವ ಆಗಲೇಬೇಕೆಂದು ಹಠ ತೊಡುತ್ತಾರೆ. ಅದರ ಹಿಂದೆ ಕೆಲಸ ಮಾಡುತ್ತಾರೆ. ಇದಕ್ಕಿಂತ ದೊಡ್ಡ ಧಾರ್ಮಿಕ ಸಾಮರಸ್ಯಕ್ಕೆ ಉದಾಹರಣೆ ಬೇಕೇ?

ಈ ತಿಂಗಳಲ್ಲಿ ಸಂಘದಲ್ಲಿ ನಗೆಹಬ್ಬ, ರಮ್ಜಾನ್ ಹಬ್ಬ ಅದರ ನಂತರ ಗಣೇಶ ಹಬ್ಬ ಜೊತೆಗೆ ವಿವಿಧ ಸಾಂಸ್ಕೃತಿಕ ಸಾಹಿತ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇದೆಲ್ಲಾ ಕಳೆದರೆ ಮತ್ತೆ ಚುನಾವಣಾ ಹಬ್ಬವೂ ಬರಲಿದೆ.

ಜನ್ಮಾಷ್ಟಮಿ, ರಮ್ಜಾನ್ ಹಾಗೂ ಗಣೇಶ ಹಬ್ಬದ ಶುಭಾಶಯಗಳೊಂದಿಗೆ

■ **ವಸಂತ ಶೆಟ್ಟಿ ಬೆಳ್ಳಾರೆ**
**ಪ್ರಧಾನ ಸಂಪಾದಕರು**

# ದೆಹಲಿ ಕರ್ನಾಟಕ ಸಂಘ

ಗಣೇಶ ಮಿತ್ರ ಮಂಡಳ

ಹಾಗೂ

ಸ್ನೇಹ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್

ಸಹಯೋಗದೊಂದಿಗೆ

## ಗಣೇಶೋತ್ಸವ

ಶನಿವಾರ, ಸೆಪ್ಟಂಬರ್ 11, 2010 : ಬೆಳಗ್ಗೆ 10.30ಕ್ಕೆ ಪ್ರತಿಷ್ಠಾಪನೆ, ಪೂಜೆ, ಪ್ರಸಾದ ವಿತರಣೆ. ಸಂಜೆ 6ಕ್ಕೆ 'ಶಾಸ್ತ್ರೀಯ ನೃತ್ಯ' ಸ್ಥಳೀಯ ಕನ್ನಡದ ಕಲಾವಿದರಿಂದ, ಮಂಗಳಾರತಿ ಹಾಗೂ ಪ್ರಸಾದ ವಿತರಣೆ.

ಭಾನುವಾರ, ಸೆಪ್ಟಂಬರ್ 12, 2010 : ಬೆಳಗ್ಗೆ 10ಕ್ಕೆ ಪೂಜೆ, ಪ್ರಸಾದ ವಿತರಣೆ. ಸಂಜೆ 4 ಗಂಟೆಗೆ ಪುನಿತ್ ರಾಜ್‌ಕುಮಾರ್ ಅಭಿನಯದ ಚಲನಚಿತ್ರ 'ವಂಶಿ', ಸಂಜೆ 6 ರಿಂದ 'ಭಕ್ತಿ ಗೀತೆ' ಸಂಘದ ಕಲಾವಿದರಿಂದ.

ಸೋಮವಾರ, ಸೆಪ್ಟಂಬರ್ 13, 2010 : ಬೆಳಗ್ಗೆ 10ಕ್ಕೆ ಪೂಜೆ, ಪ್ರಸಾದ ವಿತರಣೆ, ಬೆಳಗ್ಗೆ 11ರಿಂದ ಸ್ನೇಹ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನವರಿಂದ 'ಭಜನೆ'. ಸಂಜೆ 6ಕ್ಕೆ 'ಭಕ್ತಿ ಸಂಗೀತ' ಶ್ರೀಮತಿ ವೀಣಾ ಮರಡೂರ್ ಅವರಿಂದ, 9.30ಕ್ಕೆ ವಿಶೇಷ ಪೂಜೆ ಮತ್ತು ವಿಸರ್ಜನೆ

### ಎಲ್ಲರಿಗೂ ಆತ್ಮೀಯ ಸ್ವಾಗತ

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

# ದೆಹಲಿ ಕರ್ನಾಟಕ ಸಂಘ

"ಜನಪದರು" ಸಾಂಸ್ಕೃತಿಕ ವೇದಿಕೆ, ಹೊಸಕೋಟೆ
ಇವರು
ಪ್ರಸ್ತುತಪಡಿಸುವ ನಾಟಕ

## ಬುದ್ಧನಾದ



ರಚನೆ : ಬಾಲಗುರುಮೂರ್ತಿ
ನಿರ್ದೇಶನ : ಸುರೇಶ್ ವರ್ತೂರು

ದಿನಾಂಕ: 19.09.2010
ಸಾಯಂಕಾಲ 5.00 ಗಂಟೆಗೆ
ಸ್ಥಳ : ಸಂಘದ ಸಭಾಂಗಣ

### ತಮಗೆಲ್ಲರಿಗೂ ಆದರದ ಸ್ವಾಗತ

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ
ಹಾಗೂ
ದೆಹಲಿ ಕರ್ನಾಟಕ ಸಂಘ, ನವದೆಹಲಿ
ಇವರ ಸಂಯುಕ್ತ ಆಶ್ರಯದಲ್ಲಿ

## ಕನ್ನಡ ಚಲನಚಿತ್ರ ಪ್ರದರ್ಶನ

**ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ**
**ರಾವ್ ತುಲಾರಾಂ ಮಾರ್ಗ್, ಸೆ. 12, ಆರ್.ಕೆ. ಪುರಂ, ನವದೆಹಲಿ- 110022**

**ದಿನಾಂಕ : 12.09.2010 ರ ಭಾನುವಾರ**
**ಸಂಜೆ : 4 ಘಂಟೆಗೆ**
ಪುನೀತ್ ರಾಜ್‌ಕುಮಾರ್ ಅಭಿನಯಿಸಿರುವ
## ವಂಶಿ
ನಿರ್ದೇಶನ: ಪ್ರಕಾಶ್

**ದಿನಾಂಕ : 26.09.2010 ರ ಭಾನುವಾರ**
**ಸಂಜೆ : 6 ಘಂಟೆಗೆ**
ಸುದೀಪ್ ಮತ್ತು ರಮ್ಯ ಅಭಿನಯಿಸಿರುವ
## ಜಸ್ಟ್ ಮಾತು ಮಾತಲ್ಲಿ
ನಿರ್ದೇಶನ: ಸುದೀಪ್

ಸಾಕ್ಷ್ಯ ಚಿತ್ರ : ಕರ್ನಾಟಕ ರಾಜಕೀಯ ಇತಿಹಾಸ
ಪರಿಕಲ್ಪನೆ : ಡಾ. ಚಂದ್ರಶೇಖರ ಕಂಬಾರ
ನಿರ್ಮಾಣ : ವಾರ್ತಾ ಇಲಾಖೆ

ಸಾಕ್ಷ್ಯ ಚಿತ್ರ
ಹೈದರಾಬಾದ್ ಕರ್ನಾಟಕ ರಾಜಕೀಯ ವಿಮೋಚನೆ
ನಿರ್ಮಾಣ : ವಾರ್ತಾ ಇಲಾಖೆ

ನೀವೂ ಬನ್ನಿ, ನಿಮ್ಮ ಕುಟುಂಬದವರು ಮತ್ತು ಸ್ನೇಹಿತರನ್ನೂ ಕರೆತನ್ನಿ!
ಉಪ ನಿರ್ದೇಶಕರು, ಕರ್ನಾಟಕ ವಾರ್ತಾ ಕೇಂದ್ರ
ಕರ್ನಾಟಕ ಭವನ-2, ನಂ. 6. ಸರ್ದಾರ್ ಪಟೇಲ್ ಮಾರ್ಗ್, ಚಾಣಕ್ಯಪುರಿ, ನವದೆಹಲಿ- 110021.
ದೂರವಾಣಿ: 011-24102263, ಮೊಬೈಲ್: +91 99686 52139

# 'ಸಾಮಾಜಿಕ ಪ್ರಗತಿಶೀಲ ಸಂಸ್ಥೆ' (ರಿ)

**33, ಅಮೃತ ನಗರ, ಸೌತ್ ಎಕ್ಸ್‌ಟೆನ್‌ಶನ್-1, ನವದೆಹಲಿ -110003**
**ಫೋನ್ : 011-24624633**

## 21ನೇಯ ಸಮಾಜ ಸುಧಾರಕರ ದಿನಾಚರಣೆ

**ದಿನಾಂಕ : 25.09.2010**
**ಸಮಯ : ಸಾಯಂಕಾಲ 6.30 ಗಂಟೆಗೆ**
**ಸ್ಥಳ : ದೆಹಲಿ ಕರ್ನಾಟಕ ಸಂಘದ ಸಭಾಂಗಣ**
**ರಾವ್ ತುಲಾರಾಂ ಮಾರ್ಗ, ಸೆಕ್ಟರ್-12, ಆರ್.ಕೆ.ಪುರಂ, ನವದೆಹಲಿ-110022**

## ತಮಗೆಲ್ಲರಿಗೂ ಆದರದ ಸ್ವಾಗತ

**ಭೀಮರಾವ್ ಮುರಗೋಡ**
ಅಧ್ಯಕ್ಷರು
ಮೊ : 9312931233

**ವಿ.ವಿ. ಬಿರಾದಾರ**
ಪ್ರಧಾನ ಕಾರ್ಯದರ್ಶಿ
ಮೊ : 9873005409

# ದೆಹಲಿ ಕರ್ನಾಟಕ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆ

ಭಾರತಕ್ಕೆ ಸ್ವಾತಂತ್ರ್ಯ ಬಂದು 63 ವರ್ಷಗಳು ಸಂದಿವೆ. ಆಗಸ್ಟ್ 15ರಂದು 64ನೇ ಸ್ವಾತಂತ್ರ್ಯೋತ್ಸವವನ್ನು ದೇಶದೆಲ್ಲೆಡೆ ಸಂಭ್ರಮದಿಂದ ಆಚರಿಸಲಾಯಿತು. ಪ್ರತಿಯೊಬ್ಬ ಭಾರತೀಯನಿಗೆ ಇದೊಂದು ಹಬ್ಬದ ದಿನ. ಈ ಸುದಿನ ದೆಹಲಿ ಕನ್ನಡಿಗರಿಗೂ ಸಂಭ್ರಮದ ದಿನ ಎಂದು ದೆಹಲಿ ಕರ್ನಾಟಕ ಸಂಘದಲ್ಲಿ ಧ್ವಜಾರೋಹಣ ಮಾಡಿದ ಹಿರಿಯ ಕನ್ನಡಿಗ, ಸಂಘದ ಉಪಾಧ್ಯಕ್ಷರಾಗಿದ್ದ, ಸುಪ್ರೀಂ ಕೋರ್ಟಿನ ಹಿರಿಯ ನ್ಯಾಯವಾದಿ ಶ್ರೀ ಎಂ. ವೀರಪ್ಪ ಅವರು ನುಡಿದರು. ಮುಂದುವರಿದು ಅವರು ಮಾತನಾಡುತ್ತ ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯ ಕಾಲದಿಂದ ಇಂದಿನ ಕಾಲ ಘಟ್ಟದವರೆಗೆ ಭಾರತ ನಡೆದು ಪ್ರಗತಿಯತ್ತ ಸಾಗುತ್ತಿರುವ ಕ್ಷಣಗಳನ್ನು ಚಿಕ್ಕದಾಗಿ, ಚೊಕ್ಕದಾಗಿ ತಿಳಿಯಪಡಿಸಿದರು. ಜೊತೆಗೆ ಮುಂಬರುವ ಪೀಳಿಗೆಗೆ ಈ ಸ್ವಾತಂತ್ರ್ಯದ ಹಿನ್ನೆಲೆ ತ್ಯಾಗ. ಬಲಿದಾನಗಳ ಪರಿಚಯ ಮಾಡಿಸಬೇಕು ಎಂದು ಆಶಿಸಿದರು. ಸಧ್ಯದ ದಿನಗಳಲ್ಲಿನ ಭ್ರಷ್ಟಾಚಾರದ ತಾಂಡವದ ಬಗ್ಗೆ ಕಾಳಜಿ ವ್ಯಕ್ತಪಡಿಸುತ್ತಾ ಮುಂಬರುವ ಪೀಳಿಗೆಯನ್ನು ಭ್ರಷ್ಟಾಚಾರ ಮುಕ್ತರನ್ನಾಗಿ ಮಾಡಲು ತಂದೆ ತಾಯಿಗಳು ಶ್ರಮಿಸಬೇಕೆಂದು ಕಳಕಳಿಯಿಂದ ಕೇಳಿಕೊಂಡರು. ದೇಶವನ್ನು ದ್ವೇಷಿಸದೆ ಪ್ರೀತಿಸಬೇಕು ಎನ್ನುವ ಕಿವಿ ಮಾತು ಹೇಳಿದರು. ಇದರೊಟ್ಟಿಗೆ ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚುತ್ತ ಗತಕಾಲದ ಒಂದು ಘಟನೆಯನ್ನು ಉದಹರಿಸಿ: ಭಾರತ ಸ್ವತಂತ್ರವಾದ ಸಂದರ್ಭದಲ್ಲಿ ... ಸ್ವಾತಂತ್ರ್ಯ ಎಂದರೆ ಏನು ಎಂದು ಶ್ರೀ ರಾಜಗೋಪಾಲಚಾರ್ಯರಿಗೆ ಪ್ರಶ್ನಿಸಲಾಗಿ ಅವರು ಹೇಳಿದ್ದು ಗಣೇಶನನ್ನು ಪ್ರತಿಷ್ಠಾಪಿಸಿ 5ದಿನ ಪೂಜಿಸಿ, ನಂತರ ವಿಸರ್ಜಿಸುತ್ತೀರಿ, ಆ ರೀತಿ ನಿಮ್ಮ ಪ್ರತಿನಿಧಿಗಳನ್ನು ಚುನಾಯಿಸಿ 5 ವರ್ಷಗಳ ಕಾಲಕ್ಕಾಗಿ ಅವರನ್ನು ಪ್ರತಿಷ್ಠಾಪಿಸುತ್ತೀರಿ ನಂತರ ವಿಸರ್ಜಿಸುವ ಸ್ವಾತಂತ್ರ್ಯ ತಮಗಿದೆ, ಇದೇ ಸ್ವಾತಂತ್ರ್ಯ ಎಂದರು. ಸಂಘದ ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಅತಿಥಿಗಳನ್ನು ಸ್ವಾಗತಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅಭಿನಂದನೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ವಿದ್ಯಾಸಂಸ್ಥೆಯ ಅಧಕ್ಷ ಶ್ರೀ ಜಿಂ.ಎಂ.ಲಿಂಗರಾಜು, ಖ್ಯಾತ ಚಿತ್ರಕಲಾವಿದ ಶ್ರೀ ಭೀಮರಾವ್ ಮುರುಗೋಡ ಅವರು ಉಪಸ್ಥಿತರಿದ್ದರು.




ಶ್ರೀ ಎಂ. ವೀರಪ್ಪ ಅವರು ಧ್ವಜಾರೋಹಣ ಮಾಡುತ್ತಿರುವುದು

ಇದೇ ಸಂದರ್ಭದಲ್ಲಿ ಶ್ರೀ ಟಿ.ಎಸ್. ರಮೇಶ್, ಶ್ರೀ ಉಲ್ಲಾಸ್ ನಾಯ್ಕ್, ಶ್ರೀ ಗೋವಿಂದರಾಜ್, ಶ್ರೀ ಹರ್ಷ, ಶ್ರೀ ಸುಧೀರ್ ವಿ. ಫಡ್ನೀಸ್, ಶ್ರೀಮತಿ ಪೂಜಾ, ಶ್ರೀಮತಿ ನಿರ್ಮಲಾ, ಕು. ಪ್ರೇರಣಾ ಇವರುಗಳಿಂದ ದೇಶ ಭಕ್ತಿಗೀತೆಗಳ ಗುಂಜಾರವ ಸಭಾಂಗಣದಲ್ಲಿ ನೆರೆದವರ ಮನದಲ್ಲಿ ದೇಶಾಭಿಮಾನದ ಸ್ಫೂರ್ತಿ ತುಂಬಿತು.

■ **ಶಿವಾನಂದ ಇಂಗಳೇಶ್ವರ**




**PAVITRA SILKS & FABRICS**

*Introducing New Item's*
*Silk-Cotton & Handlooms*

**Exhibition cum Sale**
Venue :
**Delhi Karnataka Sangha**
Sector-12, R.K. Puram,
Rao Tula Ram Marg
New Delhi-110022



| | |
|---|---|
| AP-Pochmapally | Silk Sarees & Cotton Suits (Kalamkari) |
| Karnataka -Mysore Silk | Silk Sarees & Fabrics |
| Bihar-Tassar Silk | Sarees |
| Kota (Rajasthan)-Chanderi | Sarees & Suits |
| Tamilnadu-Kanjeevaram | Sarees |
| AP-Mangalgiri- Venkatagiri & Gadwal | Sarees & Suits |
| Bengal-Kantha Work- | Sarees |

*For more details contact :* **RANI S. BANGERA**
**PAVITRA SILKS & FABRICS**
(Distributor of Mysore Silk for Northern India)
6B, First Floor, Hauz Khas Village, New Delhi - 110 016
Ph: 9810222773, 9313869163, 011-26510784
e-mail: pavitrasilks1@yahoo.co.in • Website : www.ksicsilk.com

## ನಿಮಗಿದು ತಿಳಿದಿರಲಿ

1. ಸೂರ್ಯ ಶಕ್ತಿಯ ಮೂಲ
2. ಸೂರ್ಯ, ಸಾಂಸ್ಕೃತಿಕವಾಗಿ, ಯುಗಯುಗಳಿಂದ ನಮ್ಮ ಪ್ರೇರಣೆಗಳಿಗೆ ಮೂಲ.
3. ಸೂರ್ಯ, ಭೂಮಿಯಲ್ಲಿನ ಜೀವರಾಶಿಗೆ ಆಧಾರ.
4. ಬಿಸಿಲಿನಲ್ಲಿ ನೇರವಾಗಿ ನೀರು ಬಿಸಿಯಾಗುವುದು ನಮಗೆಲ್ಲ ತಿಳಿದೇ ಇದೆ.
5. ಸೂರ್ಯ ಶಕ್ತಿಯ ಪ್ರಯೋಜನ ಪಡೆದು ನೀರನ್ನು ದಕ್ಷವಾಗಿ ಬಿಸಿ ಮಾಡುವ ವಿಧಾನವೇ ಸೌರ ಜಲ ಹೀಟರ್.
6. ಚಪ್ಪಟೆಯಾದ ಸಂಗ್ರಾಹಕ ಫಲಕ, ಸೌರ ಜಲ ಹೀಟರ್‌ನ ಕೇಂದ್ರ ಅಂಗ. ಇದರ ಮೇಲ್ಭಾಗ, ಸೂರ್ಯ ಶಾಖವನ್ನು ಹೀರುವ ಕಪ್ಪು ಬಣ್ಣದ ಹೊಳೆಯುವ ಹಾಳೆ. ಇದರ ಮೇಲೆ ಗಾಜು ತಳ ಭಾಗ ಹಾಗೂ ಅಕ್ಕಪಕ್ಕಗಳು ಉಷ್ಣ ನಿರೋಧಕವನ್ನೊಳಗೊಂಡಿದೆ. ಕೊಳವೆಗಳಲ್ಲಿ ನೀರು ಬಿಸಿಯಾಗಿ ಹರಿದು ಟ್ಯಾಂಕ್‌ನಲ್ಲಿ ಸಂಗ್ರಹವಾಗುತ್ತದೆ.
7. ಇಂತಹ ಹಲವಾರು ಸಂಗ್ರಾಹಕಗಳನ್ನು ಸಮಾನಾಂತರವಾಗಿಯೂ ಸಾಲಾಗಿಯೂ ಜೋಡಿಸಿ ಹೋಟೆಲ್, ಆಸ್ಪತ್ರೆ, ಡೈರಿ, ಕೈಗಾರಿಕಾ ಘಟಕ ಮುಂತಾದ ವಾಣಿಜ್ಯ ಮತ್ತು ಔದ್ಯಮಿಕ ಕ್ಷೇತ್ರದಲ್ಲಿ ಹೆಚ್ಚು ಪ್ರಮಾಣದ ಬಿಸಿ ನೀರನ್ನು ಪಡೆದು ಬಹು ಮೌಲ್ಯದ ಕುಲಿಮೆ ಎಣ್ಣೆ ಮತ್ತು ಕಲ್ಲಿದ್ದಲನ್ನು ಉಳಿಸಬಹುದು. ದಿನಕ್ಕೆ ಎರಡು ಲಕ್ಷ ನಲವತ್ತು ಸಾವಿರ ಲೀಟರ್ ನೀರನ್ನೊದಗಿಸುವ ಕ್ಷಮತೆಯಿರುವ ಘಟಕಗಳನ್ನು ಈಗಾಗಲೇ ದೇಶದಲ್ಲಿ ಸ್ಥಾಪಿಸಲಾಗಿದೆ.
8. ನಮ್ಮ ಮನೆಗಳಲ್ಲಿಯೂ ಸೌರ ಜಲ ಹೀಟರ್‌ಗಳ ಪ್ರಯೋಜನವಿದೆ. ಇದರಿಂದ ನಮಗೆ ಆರಾಮವಾಗುವುದಲ್ಲದೆ ವಿದ್ಯುತ್ ಖರ್ಚಿನಲ್ಲಿ ಉಳಿತಾಯ ಕೂಡಾ ಆಗಬಹುದು.
9. ಮುಕ್ತವಾಗಿ, ಹೇರಳವಾಗಿ ಲಭ್ಯವಿರುವ ಪ್ರದೂಷನ ರಹಿತ ಸೌರ ಶಕ್ತಿಯನ್ನು ಈ ತಂತ್ರಜ್ಞಾನ ದುಡಿಸಿಕೊಳ್ಳುತ್ತದೆ. ನಿಗದಿತ ಪ್ರಮಾಣ ವ್ಯವಸ್ಥೆ ಒಳಗೊಂಡಿದ್ದು, ಈ ಸೌರ ಜಲ ಹೀಟರ್‌ಗಳ ನಿರ್ವಹಣೆ ಅತೀ ಕಡಿಮೆ.
10. ಹಾಗೂ ಇವುಗಳನ್ನು ಉಪಯೋಗಿಸುವವರಿಗೆ ಪ್ರೋತ್ಸಾಹಕ ವಾಣಿಜ್ಯ ವ್ಯವಸ್ಥೆ ಹಾಗೂ ಕರ ರಿಯಾಯಿತಿ ಸೌಲಭ್ಯವಿದೆ.
11. ರಾಜ್ಯ ಮಟ್ಟದಲ್ಲಿ ಸೌರ ಉಷ್ಣ ಕಾರ್ಯಕ್ರಮ ಅನುಷ್ಠಾನಕ್ಕಾಗಿ ರಾಜ್ಯಗಳ ಇಲಾಖೆ ಮತ್ತು ಸಂಘ ಸಂಸ್ಥೆಗಳಿವೆ. ಕೇಂದ್ರ ಮಟ್ಟದಲ್ಲಿ ಅಪಾರಂ ಪರ ಶಕ್ತಿ ಮೂಲ ಮಂತ್ರಾಲಯ ಇದರ ಅನುಷ್ಠಾನ ಮಾಡುತ್ತಿದೆ.

ವಿಳಾಸ :

ಅಪಾರಂ ಪರ ಶಕ್ತಿ ಮೂಲ ಮಂತ್ರಾಲಯ

ಬ್ಲಾಕ್-14, ಸಿ.ಜಿ.ಒ. ಕಾಂಪ್ಲೆಕ್ಸ್

ಲೋಧಿ ರಸ್ತೆ

ನವದೆಹಲಿ-110003

■ ಸಂಗ್ರಹ : **ಸರೋಜ ವಿಜಯಕುಮಾರ್**

## ಮುನ್ನೋಟ

ಮೊನ್ನೆ ಬೆಂಗಳೂರಿನಿಂದ ಹಠಾತ್ ಫೋನು, 'ಏನು? ಎಲ್ಲಾ ಸೌಖ್ಯವಾಗಿದ್ದೀರ? ತುಂಬಾ ಮಳೆಯಂತೆ, ಯಮುನೆಯಲ್ಲಿ ಪ್ರವಾಹವಂತೆ, ಪ್ರಶ್ನೆಗಳ ಸರಮಾಲೆ, ನಮ್ಮೂರ್ನಲ್ಲಿ ಸಾಮಾನ್ಯವಾದ ಈ ಮಳೆ ದೆಹಲಿಯಲ್ಲಿ ಹೆಚ್ಚಿಸಿದ ಹಾಹಾಕಾರ ಎಂತು? ಅಂತೂ, ನನ್ನ ದೆಹಲಿ ಅನುಭವದ ಹನ್ನೆರೆಡು ವರುಷಗಳಲ್ಲಿ ಕಾಣದ ಮಳೆ-ಈ ಬಾರಿ ಬಂತು. ತನ್ನೊಂದಿಗೆ ಪ್ರಕೃತಿದತ್ತವಾದ ಸೌಂದರ್ಯವನ್ನು ತಂತು.

ಇದೇ ಅಕ್ಟೋಬರ್‌ನಲ್ಲಿ ನಡೆಯುವ ಕಾಮನ್‌ವೆಲ್ತ್ ಕ್ರೀಡೆಗಳ ಸಲುವಾಗಿ ನಡೆಯುತ್ತಿರುವ ನಾಗರೀಕ ಸೌಲಭ್ಯಗಳ ಉನ್ನತೀಕರಣ ಹಾಗೂ ರಸ್ತೆ, ಪಾರ್ಕುಗಳ ವೈಭವೀಕರಣದ ಕುರುಹುಗಳು - ಹೊಸ ಹೊಸ ಅನುಭವವನ್ನು ತರಲಾರಂಭಿಸಿದೆ. ಹಾಗಾಗಿ ಮುಂದಿನ ದಿನಗಳು ದೆಹಲಿ ಪ್ರವಾಸಕ್ಕೆ ಪ್ರಾಶಸ್ತ್ಯವಾಗಲಿವೆ. ಇನ್ನು ಕರ್ನಾಟಕ ಸಂಘದ ಕಾರ್ಯಕ್ರಮಗಳೂ ಸಹ ದೆಹಲಿಯ ಮಳೆಯಂತೆ ಒಂದಾದ ನಂತರ ಮತ್ತೊಂದು ನಡೆಯಲಿವೆ. ಆತ್ಮೀಯರೇ, ಬನ್ನಿ-ಕಾರ್ಯಕ್ರಮಗಳನ್ನು ಆನಂದಿಸಿ-ಪ್ರೋತ್ಸಾಹಿಸಿ.

**ಆರ್.ರೇಣುಕುಮಾರ್**, ಪ್ರಧಾನ ಕಾರ್ಯದರ್ಶಿ

## ಉಚಿತ ವೈದ್ಯಕೀಯ ತಪಾಸಣೆ

ಡಾ. ಭೀಮಭಟ್ಟ ಅವರು ಇದೇ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಜಪಾನಿನ ನಗರಗಳಲ್ಲಿ ರೋಗಿಗಳಿಗೆ ಆಯುರ್ವೇದ ವೈದ್ಯಕೀಯ ತಪಾಸಣೆ, ಸಲಹೆ, ಶಿಕ್ಷಣ-ತರಬೇತಿ ಮತ್ತು ಉಪನ್ಯಾಸ ಕೊಡುವುದರಿಂದ, ಉಚಿತ ವೈದ್ಯಕೀಯ ಸಲಹೆ ಕರ್ನಾಟಕ ಸಂಘದಲ್ಲಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಇರುವುದಿಲ್ಲ. ನವೆಂಬರ್ ತಿಂಗಳ ಕೊನೆಯ ಭಾನುವಾರ ವೈದ್ಯಕೀಯ ಸಲಹೆ ಕೊಡುತ್ತಾರೆ.

■ **ಪ್ರಧಾನ ಕಾರ್ಯದರ್ಶಿ**

## ಅಲ್ಲಲ್ಲಿ ಗಣೇಶ ಹಬ್ಬ


ಜನಕಪುರಿ ಕನ್ನಡ ಕೂಟದ ಗಣೇಶೋತ್ಸವ 19.09.2010 ರಂದು ಮೋಡರ್ನ್ ಇರಾ, ಕಾನ್‌ವೆಂಟ್ ಸ್ಕೂಲ್, ಬಿ-1, ಜನಕಪುರಿಯಲ್ಲಿ ಬೆಳಗ್ಗೆ 10 ಗಂಟೆಯಿಂದ ನಡೆಯಲಿದೆ. ಹೆಚ್ಚಿನ ವಿವರಗಳಿಗೆ : ಎನ್.ಆರ್. ಶ್ರೀನಾಥ್, ಕಾರ್ಯದರ್ಶಿ (9350010944) ಅವರನ್ನು ಸಂಪರ್ಕಿಸಿ.

ದೆಹಲಿ ಕನ್ನಡ ಪೋಲಿಸ್ ಕಲ್ಯಾಣ ಸಮಿತಿಯು 8ನೇ ವಾರ್ಷಿಕ ಗಣೇಶೋತ್ಸವವನ್ನು ಪೋಲಿಸ್ ಕಾಲೋನಿ, ಅಶೋಕ್ ವಿಹಾರ್‌ದಲ್ಲಿ, ಸೆಪ್ಟೆಂಬರ್ 11 ಮತ್ತು 12 ರಂದು ಆಚರಿಸುತ್ತಿದೆ. 11ರ ಬೆಳಗ್ಗೆ 11ಗಂಟೆಗೆ ಪ್ರತಿಷ್ಠಾಪನೆ. 12 ರಂದು ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ವಿಸರ್ಜನೆ. ಹೆಚ್ಚಿನ ವಿವರಗಳಿಗೆ : ಎ.ಟಿ. ಶ್ರೀನಿವಾಸ್, ಕಾರ್ಯದರ್ಶಿ (9910388828) ಅವರನ್ನು ಸಂಪರ್ಕಿಸಿ.

ಗುರ್‌ಗಾಂವ್ ಕನ್ನಡ ಸಂಘವು ಸೆಪ್ಟೆಂಬರ್ 11 ಮತ್ತು 12ರಂದು ರಾಧಾಕೃಷ್ಣ ಹಾಲ್, ಸೆಕ್ಟರ್-4, ಗುರ್‌ಗಾಂವ್‌ನಲ್ಲಿ ಗಣೇಶ ಹಬ್ಬವನ್ನು ಆಚರಿಸುತ್ತಿದೆ. 11ರ ಬೆಳಗ್ಗೆ 10.30ಕ್ಕೆ ಪ್ರತಿಷ್ಠಾಪನೆ ಸಾಯಂಕಾಲ 7.30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ 12ರಂದು ಬೆಳಗ್ಗೆ 10ಗಂಟೆಗೆ ವಿಸರ್ಜನೆ. ಹೆಚ್ಚಿನ ವಿವರಗಳಿಗೆ : ದಯಾನಂದ, ಕಾರ್ಯದರ್ಶಿ (9910112588) ಅವರನ್ನು ಸಂಪರ್ಕಿಸಿ.

ಗೌಡ ಸಾರಸ್ವತ ಸಮಾಜವು ಸಾರ್ವಜನಿಕ ಗಣೇಶೋತ್ಸವವನ್ನು ಸೆಪ್ಟೆಂಬರ್ 11 ರಿಂದ 15 ರವರೆಗೆ, ಸಾರಸ್ವತ ಸಾಂಸ್ಕೃತಿಕ್ ಭವನ, ಗೀತಾ ಮಂದಿರ ಮಾರ್ಗ, ನ್ಯೂ ರಾಜೇಂದ್ರ ನಗರದಲ್ಲಿ ಆಚರಿಸಲಿದೆ. ಹೆಚ್ಚಿನ ವಿವರಗಳಿಗೆ ಪ್ರಶಾಂತ್ ಪೈ, ಕಾರ್ಯದರ್ಶಿ (28744272 / 2065) ಅವರನ್ನು ಸಂಪರ್ಕಿಸಿ.

# ಮನಮಿಡಿದ ಗಗ್ಗರ



ರಾಷ್ಟ್ರೀಯ ಪ್ರಶಸ್ತಿ ಪಡೆದ ನಿರ್ದೇಶಕ ಶಿವಧ್ವಜ್ ಶೆಟ್ಟಿ

ತುಳು ಸಂಸ್ಕೃತಿಯ ಎರಡು ಕಣ್ಣುಗಳೆಂದರೆ ಯಕ್ಷಗಾನ ಮತ್ತು ಭೂತಾರಾಧನೆ. ನಾಗಾರಾಧನೆ, ಕಂಬಳ, ಕೋಳಿಕಟ್ಟ ಇತ್ಯಾದಿಗಳೆಲ್ಲ ಆನಂತರದ ಸಾಲಿನಲ್ಲಿ ಬರುತ್ತವೆ. ಇವೆಲ್ಲಾ ಈ ಪ್ರದೇಶದಲ್ಲಿ ಎಂದಿನಿಂದ ಕಾಣಿಸಿಕೊಂಡವು ಎಂದು ಹೇಳುವುದು ಕಷ್ಟ. ಆದರೆ ಜಾಗತೀಕರಣದ ಈ ಕಾಲಘಟ್ಟದಲ್ಲಿಯೂ ಇವು ತಮ್ಮ ಎಂದಿನ ಜನಪ್ರಿಯತೆಯನ್ನು ಉಳಿಸಿಕೊಂಡು ಬಂದಿವೆ ಎಂಬುದಂತೂ ನಿಜ. ಅತ್ಯಂತ ಹೆಚ್ಚು ವಿದ್ಯಾವಂತರಿರುವ ತುಳುನಾಡು, ಯಕ್ಷಗಾನ ಮತ್ತು ಭೂತಾರಾಧನೆಯನ್ನು ಉಳಿಸಿ, ಬೆಳೆಸಿಕೊಂಡು ಬಂದ ಬಗೆಯು ಕುತೂಹಲಕಾರಿಯಾಗಿದೆ.

ಮೇಲೆ ಹೇಳಿದ ಎರಡು ಪ್ರಕಾರಗಳು ಎಷ್ಟು ಬಲಿಷ್ಠವಾಗಿವೆ ಎಂದರೆ, ಅವು ಬೇರಾವ ಪ್ರಕಾರಗಳನ್ನು ಬೆಳೆಯಲು ಬಿಡಲಿಲ್ಲ. ಯಕ್ಷಗಾನ ಭೂತಾರಾಧನೆಗಳನ್ನು ಆಧರಿಸಿ ಇದುವರೆಗೆ ಒಂದೇ ಒಂದು ಒಳ್ಳೆಯ ಕಾದಂಬರಿಯಾಗಲೀ, ಕತೆಯಾಗಲೀ, ನಾಟಕವಾಗಲೀ ಬಂದಿಲ್ಲ. ತುಳುನಾಡಿನಾದ್ಯಂತ ಕಂಡು ಬರುವ ಯಕ್ಷಗಾನ ಕಲಾವಿದರ ಬದುಕನ್ನು ಆಧರಿಸಿದ ಒಳ್ಳೆಯ ಒಂದು ಆತ್ಮಚರಿತ್ರೆಯೂ ಬಂದಿಲ್ಲ. ಭೂತಾರಾಧನೆಯ ಕಲಾವಿದರ ದಾರುಣ ಬದುಕನ್ನು ಆಧರಿಸಿದ ಕಲಾತ್ಮಕ ಚಿತ್ರಗಳೂ ಬಂದಿಲ್ಲ ಎಂಬುದನ್ನು ಗಮನಿಸಿದಾಗ 'ಗಗ್ಗರ' ಚಲನಚಿತ್ರದ ಮಹತ್ವ ತಿಳಿಯುತ್ತದೆ.



ತನಿಯನ ಪಾತ್ರದಲ್ಲಿ ಎಂ.ಕೆ. ಮಟ್ಟು, ಉಪ್ಪಿನಂಗಡಿ

ಹಾಗೆ ನೋಡಿದರೆ ತುಳು ಸಂಸ್ಕೃತಿಯ ಸೂಕ್ಷ್ಮ ಮುಖವೊಂದನ್ನು ಮರುಸೃಷ್ಟಿಸಿದ ಮೊದಲ ಪ್ರಾಮಾಣಿಕ ಪ್ರಯತ್ನವೇ ಗಗ್ಗರ. ತುಳುವಿನಲ್ಲಿ ಇದುವರೆಗೆ ಬಂದ ಚಲನಚಿತ್ರಗಳಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾದದ್ದೆಂದರೆ 'ಕೋಟಿಚೆನ್ನಯ' ಮಾತ್ರ. ಉಳಿದೆಲ್ಲಾ ಚಲನಚಿತ್ರಗಳು 'ತುಳು ಭಾಷೆಯಲ್ಲಿವೆ' ಎಂಬುದನ್ನು ಹೊರತುಪಡಿಸಿದರೆ ಅವುಗಳಲ್ಲಿ 'ತೌಳವ ಸಂಸ್ಕೃತಿ'ಯ ಅಂಶಗಳೇನೂ ಇಲ್ಲ.

'ಗಗ್ಗರ'ದ ನಿರ್ಮಾತೃ ಶ್ರೀ ಶಿವಧ್ವಜ ಶೆಟ್ಟಿ ಅವರು ಭೂತಾರಾಧನೆಯನ್ನು ಆಧುನಿಕ ತಿಳುವಳಿಕೆಯ ಹಿನ್ನೆಲೆಯಲ್ಲಿ ಮರುಸೃಷ್ಟಿಸಲು ಪ್ರಯತ್ನಿಸಿದ್ದಾರೆ. ಈ ಪ್ರಯತ್ನವು ಸ್ವಾಗತಾರ್ಹ ಮಾತ್ರವಲ್ಲ ಅಭಿನಂದನಾರ್ಹವೂ ಹೌದು, ಏಕೆಂದರೆ ಶಿವಧ್ವಜ ಅವರಿಗೆ 'ಭೂತಾರಾಧನೆ' ಎಂಬುದು ಒಂದು ದಳದಳಿಕೆಯಲ್ಲ, ಕೇವಲ ಪರಂಪರೆಯ ಭಾಗವೂ ಅಲ್ಲ. ಬದಲು ಪರಂಪರೆ ಮನುಕುಲದ ಮೇಲೆ ತಂದೊಡ್ಡಿದ ಒಂದು ದೊಡ್ಡ ಸವಾಲು ಕೂಡಾ ಹೌದು. ಈ ಸವಾಲನ್ನು ಇದಿರಿಸಲು ಕೆಚ್ಚೆದೆ ಬೇಕು. ಪರಂಪರೆಯ ಬಗ್ಗೆ ತಿಳುವಳಿಕೆ ಬೇಕು. ಎಲ್ಲಕ್ಕಿಂತ ಮಿಗಿಲಾಗಿ ಪರಂಪರೆಯ ಚೌಕಟ್ಟಿನಾಚೆ ಇಣುಕಿ ನೋಡುವ ಮುನ್ನೋಟವೂ ಬೇಕು.

ಸಿನಿಮಾ ಆರಂಭವಾಗುವಾಗ ಬಿಬಿಸಿಯ ಕೆಲವರು 'ಶಂಕರ'ನೆಂಬ ಶಾಲಾ ಅಧ್ಯಾಪಕನ ಅನುಭವ ಕಥನ ಕೇಳಲು ಬರುತ್ತಾರೆ. ಶಂಕರನು ಪರಂಪರಾನುಗತವಾಗಿ ಭೂತ ನರ್ತನ ಮಾಡುವ ತನಿಯನೆಂಬ ಕಲಾವಿದನ ವಿದ್ಯಾವಂತ ಮಗ. ಬಿಬಿಸಿ ಯವರಿಗೆ ತನ್ನ ಕತೆಯನ್ನು ಹೇಳುವ ಶಂಕರನು ತನ್ನ ದೃಷ್ಟಿಕೋನದ ಮೂಲಕ ತನ್ನ ತಂದೆಯ ಬದುಕನ್ನು, ಅದಕ್ಕಂಟಿಕೊಂಡು ಬಂದ ಭೂತಾರಾಧನೆಯ ಬಗ್ಗೆಯೂ ತಿಳಿಸಿ ಹೇಳುತ್ತಾನೆ. ಅಂದರೆ ವಿದ್ಯಾವಂತ ತರುಣನೋರ್ವನು ಕಣ್ಣುಗಳ ಮೂಲಕ ಭೂತಾರಾಧನೆಯನ್ನು ವಿವರಿಸುವ ಪರಿಯಿದು.

ಶಂಕರನ ತಂದೆ ತನಿಯನಿಗೆ ವರ್ಷಕ್ಕೆ ನಾಲ್ಕೈದು ತಿಂಗಳುಗಳ ಕಾಲ ಭೂತಕ್ಕೆ ಕಟ್ಟುವ ಕೆಲಸ. ಆ ಭೂತ ಕಟ್ಟಿ, ತಾನೇ ದೈವವಾದಾಗ ಆತನಿಗೆ ಊರೆಲ್ಲಾ ಕೈ ಮುಗಿಯುತ್ತದೆ. ಆ ಹೊತ್ತಿನಲ್ಲಿ ಆತನಿಗೆ ತಿನ್ನಲು ಕೂಡಾ ಒಂದಷ್ಟು ದೊರೆಯುತ್ತದೆ. ಆದರೆ ಭೂತಾರಾಧನೆಯ 4-5 ತಿಂಗಳು ಕಳೆದ ಆನಂತರ ತನಿಯನನ್ನು ಕೇಳುವವರೇ ಇಲ್ಲ. ಆತ ದೈವದ ಸೇವೆ ಮಾಡುವುದರಿಂದಾಗಿ ಉಳಿದ ದಿನಗಳಲ್ಲಿ ಆತ ಬೇರೆ ಕೆಲಸ ಮಾಡುವಂತೆಯೂ ಇಲ್ಲ. ಹೀಗಾಗಿ ಆತ ಬಹುಮಟ್ಟಿಗೆ ಭಿಕ್ಷೆ ಬೇಡಿ ಬದುಕಬೇಕಾಗುತ್ತದೆ. ಈ ಅಸಹಾಯಕತೆಯಲ್ಲಿ ಹುಟ್ಟುವ ದುಃಖವನ್ನು ಮರೆಯಲು ತನಿಯ ಕುಡಿಯುತ್ತಾನೆ. ಇದರಿಂದಾಗಿ ಆತನ ಬದುಕು ಇನ್ನಷ್ಟು ಬರ್ಭರವಾಗುತ್ತದೆ. ರಾತ್ರಿ ದೈವವಾಗುವ ತನಿಯನು ಹಗಲಿನಲ್ಲಿ ಬಡತನದ ಬೇಗೆಯಲ್ಲಿ ಬೇಯುವುದನ್ನು ಚಿತ್ರ ಮನಮುಟ್ಟುವಂತೆ ಚಿತ್ರಿಸುತ್ತದೆ.

ತಂದೆಯ ಈ ದಾರುಣ ಬದುಕನ್ನು ನೋಡುತ್ತಾ ಬೆಳೆದ ಶಂಕರನು ಭೂತಾರಾಧನೆಯ ಕುಣಿತವನ್ನು ಕಲಿತರೂ, ಅದರಲ್ಲಿ ಮುಂದುವರಿಯಲು ಇಚ್ಛಿಸದೆ ಶಾಲಾ ಮಾಸ್ತರನಾಗುತ್ತಾನೆ. ಈ ನಡುವೆ ಹೊಳೆ ದಾಟುವಾಗ ಜಾರಿ ಬಿದ್ದ ತನಿಯನ ಸೊಂಟ ಮುರಿದು ಹೋಗುತ್ತದೆ. ಅವನನ್ನು ದೈವ ಮಾಡಿದ ಮಂದಿಗಳೆಲ್ಲಾ ಅನುಕಂಪದ ಮಾತಾನ್ನಾಡಿದರಾದರೂ ತನಿಯನ ಚಿಕಿತ್ಸೆಗೆ ಬೇಕಾದಷ್ಟು ಹಣ ಬರುವುದಿಲ್ಲ. ಈ ಸಲ ನನಗೆ ಭೂತಕ್ಕೆ ಕಟ್ಟಲಾಗುವುದಿಲ್ಲ ಎಂದು ತನಿಯ ಅಂಗಲಾಚಿ ಹೇಳುತ್ತಾನೆ. ಊರವರಿಗೆ ಇದು ದೊಡ್ಡ ಸಮಸ್ಯೆಯಾಗುವುದಿಲ್ಲ, ಏಕೆಂದರೆ ಅವರೆಲ್ಲ 'ನಿನ್ನ ಮಗ ಶಂಕರ ಭೂತಕ್ಕೆ ಕಟ್ಟಲಿ' ಎಂದು ಆರಾಮವಾಗಿ ಹೇಳಿ ಬಿಡುತ್ತಾರೆ. ಆದರೆ ತನಿಯನ ನಿರೀಕ್ಷೆಯಂತೆ ಶಂಕರನು ತಾನು ಭೂತಕ್ಕೆ ಕಟ್ಟುವುದಿಲ್ಲ ಎಂದು ಬಿಡುತ್ತಾನೆ. ಆಗ ಮಾತ್ರ ಆರಾಮವಾಗಿದ್ದ ಊರವರೆಲ್ಲ ಆಪತ್ತು ಬಂದವರಂತೆ ತಲ್ಲಣಗೊಳ್ಳುತ್ತಾರೆ. ತನಿಯನ ದುಗುಡ ಹೆಚ್ಚಾಗುತ್ತದೆ. ಸಿನಿಮಾದ ಅತ್ಯುತ್ತಮ ಭಾಗವೆಂದರೆ ಇದೇ ಆಗಿದೆ.



ತನಿಯನ ಮಡದಿ ಪಾತ್ರದಲ್ಲಿ ಜಯಶೀಲ, ಮಂಗಳೂರು

ಕೊನೆಗೆ ಏನೋ ಯೋಚಿಸಿದ ಶಂಕರನು ಭೂತ ಕಟ್ಟಲು ಒಪ್ಪಿಕೊಳ್ಳುತ್ತಾನೆ. ತನಿಯನು ಸೇರಿದಂತೆ ಊರವರೆಲ್ಲ ನಿರಾಳವಾಗುತ್ತಾರೆ. ಶಂಕರನು ಕ್ರಮಬದ್ಧವಾಗಿ (ಆತ ದೈವವಾದಾಗ ಆತನ ಶಾಲಾ ಮಕ್ಕಳು ಆತನನ್ನು ನೋಡಿ ಕಿಸಕ್ಕನೆ ನಗುವ ದೃಶ್ಯ ನನ್ನಲ್ಲಿ ಗಾಢವಾಗಿ ಉಳಿದು ಬಿಟ್ಟಿದೆ) ಭೂತ ಕಟ್ಟಿ ಕುಣಿಯುತ್ತಾನೆ. ಎಲ್ಲಾ ಮುಗಿದಾದ ಆನಂತರ ಆತ ಗಗ್ಗರದ (ಭೂತದ ಕಾಲಿನ ಗೆಜ್ಜೆ) ಶಬ್ದದಿಂದ ಹೋಗುತ್ತಿದ್ದ ಊರವರನ್ನು ಕರೆಯುತ್ತಾನೆ. "ನಾನು ಪರಂಪರೆಗೆ ಗೌರವ ಕೊಟ್ಟು ಭೂತ ಕಟ್ಟಿದೆ. ನೀವು ಭೂತ ಕಟ್ಟುವ ಕಲಾವಿದರಿಗೆ ಸೂಕ್ತ ಸಂಭಾವನೆ ನೀಡದಿದ್ದರೆ ಇನ್ನು ಮುಂದೆ ನಾನು ಮುಖಕ್ಕೆ ಬಣ್ಣ ಹಚ್ಚುವುದಿಲ್ಲ" ಎಂದು ಘೋಷಿಸಿ ಬಿಡುತ್ತಾನೆ. ಸ್ವಲ್ಪ ಕಸಿವಿಸಿಗೊಂಡರೂ ಜನರು ಒಪ್ಪುವಲ್ಲಿಗೆ ಸಿನಿಮಾ ಮುಗಿಯುತ್ತದೆ. ಬಿಬಿಸಿಯವರಿಗೆ ತನ್ನ ಮಡದಿಯನ್ನು ಮಗುವನ್ನು ಶಂಕರ ಪರಿಚಯಿಸುತ್ತಾನೆ. ಪರಂಪರೆಯ ಒಡಲೊಳಗಿಂದ ಹೊಸ ಬೆಳಕು ಮೂಡಿದಂತಾಗುತ್ತದೆ.

ಹೀಗೆ 'ಗಗ್ಗರ'ವು ತೀವ್ರವಾದ ವೈಚಾರಿಕತೆಯಿಂದ ಭೂತಾರಾಧನೆಯನ್ನು ಮೂಢನಂಬಿಕೆ ಎಂದು ಕರೆದು ತಿರಸ್ಕರಿಸುವುದಿಲ್ಲ. 'ಜಾನಪದ' ಹೆಸರಿನಲ್ಲಿ ಪರಂಪರೆಯನ್ನು ವೈಭವೀಕರಿಸುವುದೂ ಇಲ್ಲ. ಬದಲು ಆಧುನಿಕ ಅರಿವಿನಲ್ಲಿ ಭೂತಾರಾಧನೆಯನ್ನು ನೋಡಲು ಪ್ರಚೋದಿಸುತ್ತದೆ.

ಸುರೇಶ ಭೈರ ಸಂದ್ರರವರು ತುಳುನಾಡಿನ ಹಸಿರು, ಏರುತಗ್ಗುಗಳನ್ನು, ಬಡತನವನ್ನು ಅತ್ಯದ್ಭುತವಾಗಿ ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದಾರೆ. ಸುಚೇಂದ್ರ ಪ್ರಸಾದ್ ಅವರು ಶಂಕರನಾಗಿ ಮನಮುಟ್ಟುವಂತೆ ಅಭಿನಯಿಸಿದ್ದಾರೆ. ಎಂ.ಕೆ. ಮಟ್ಟು ಉಪ್ಪಿನಂಗಡಿ ಅವರು ತನಿಯನಾಗಿ ಭಾವಪೂರ್ಣ ಅಭಿನಯ ನೀಡಿದ್ದಾರೆ.

ಶಿವಧ್ವಜ ಶೆಟ್ಟಿ ಅವರ ಸಾಧನೆಗೆ ಸಹಜವಾಗಿ ರಾಷ್ಟ್ರಪ್ರಶಸ್ತಿ ದೊರಕಿದೆ. ತುಳು ಸಂಸ್ಕೃತಿಯ ಸೂಕ್ಷ್ಮಗಳನ್ನು ಚೆನ್ನಾಗಿ ಬಲ್ಲ ಅವರಿಂದ ಇನ್ನಷ್ಟು ಚಿತ್ರಗಳು ಬರಲಿ ಎಂದು ಹಾರೈಸುತ್ತೇನೆ.

■ **ಡಾ. ಪುರುಷೋತ್ತಮ ಬಿಳಿಮಲೆ**

# ಅನೆಕ್ಸ್ ಕಟ್ಟಡ ಉದ್ಘಾಟನೆ

ಮುಖ್ಯಮಂತ್ರಿ ಬಿ.ಎಸ್ ಯಡ್ಯೂರಪ್ಪ  ಅವರು ದೆಹಲಿಯ ಕೌಟಿಲ್ಯ ಮಾರ್ಗದ ಕರ್ನಾಟಕ ಭವನ _ 1 ರ ಕಾವೇರಿ ಭವನ ಹಿಂಭಾಗ ನಿರ್ಮಿಸಲಾಗಿರುವ ನಾಲ್ಕು ಮಹಡಿಯ ಅತ್ಯಾಧುನಿಕ ಅನೆಕ್ಸ್ ಕಟ್ಟಡವನ್ನು ದಿನಾಂಕ 19.08.2010ರಂದು ಉದ್ಘಾಟಸಿದರು.

ಉದ್ಘಾಟನೆ ಬಳಿಕ ಮಾತನಾಡಿದ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಮೂರು ಕರ್ನಾಟಕ ಭವನಗಳು ಕಾರ್ಯ ನಿರ್ವಹಿಸುತ್ತಿವೆ. ಆದರೆ ಕಾರ್ಯ ನಿಮಿತ್ತ ರಾಜ್ಯದಿಂದ ನವದೆಹಲಿಗೆ ಹೆಚ್ಚು ಗಣ್ಯರು ಆಗಮಿಸುವ ಸಂದರ್ಭದಲ್ಲಿ ಈ ಭವನಗಳಲ್ಲಿ ವಾಸ್ತವ್ಯದ ಕೊಠಡಿಗಳ ಕೊರತೆ ತಲೆದೂರುತ್ತಿತ್ತು. ಈ ವೇಳೆ ಗಣ್ಯರು ಖಾಸಗಿ ಹೋಟೆಲ್‌ಗಳನ್ನು ಅವಲಂಬಿಸಬೇಕಾಗಿತ್ತು. ಇದನ್ನು ಮನಗಂಡ ರಾಜ್ಯಸರ್ಕಾರ ಹೊಸದಾಗಿ ಅನೆಕ್ಸ್ ಕಟ್ಟಡ ನಿರ್ಮಿಸಲು ಮುಂದಾಯಿತು. ರಾಜ್ಯಸರ್ಕಾರ ತೆಗೆದುಕೊಂಡ ಈ ನಿರ್ಧಾರದಿಂದ ಇಂದು ನಾಲ್ಕು ಮಹಡಿಯ ಅತ್ಯಾಧುನಿಕ ಅನೆಕ್ಸ್ ಕಟ್ಟಡ ನಿರ್ಮಾಣಗೊಂಡಿದೆ.

36 ಕೋಟಿ ರೂಪಾಯಿ ವೆಚ್ಚದಲ್ಲಿ ನಾಲ್ಕು ಮಹಡಿಯ ಅನೆಕ್ಸ್ ಕಟ್ಟಡ ನಿರ್ಮಿಸಲಾಗಿದ್ದು, ರಾಜ್ಯ ಲೋಕೋಪಯೋಗಿ ಇಲಾಖೆ ನಿಗದಿತ ಅವಧಿಯೊಳಗೆ  ಕಾಮಗಾರಿ ಪೂರ್ಣಗೊಳಿಸಿದೆ. ನೂತನ ಅನೆಕ್ಸ್ ಕಟ್ಟಡದಲ್ಲಿ ಮುಖ್ಯಮಂತ್ರಿ ಮತ್ತು ರಾಜ್ಯಪಾಲರ ಅತಿ ಸುಸಜ್ಜಿತ ಕೊಠಡಿ ಒಳಗೊಂಡತೆ ಒಟ್ಟು 34 ಕೊಠಡಿಗಳಿದ್ದು, ಇದರಲ್ಲಿ 24 ಗಣ್ಯರ ಕೊಠಡಿ, 10 ಅತಿಗಣ್ಯರ ಕೊಠಡಿ ಒಳಗೊಂಡಿದೆ. ನೆಲಮಹಡಿಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಇದೆ, ಅಲ್ಲದೆ ನೂತನ ಅನೆಕ್ಸ್ ಕಟ್ಟಡದಲ್ಲಿ ಅಂತರ್ಜಾಲ ಸೌಲಭ್ಯ, ಉನ್ನತ ಸುರಕ್ಷಾ ವ್ಯವಸ್ಥೆ, ಮಳೆನೀರು ಕೊಯ್ಲು ವ್ಯವಸ್ಥೆ, ಪ್ರತಿಮಹಡಿಯಲ್ಲೂ ಸಭಾಂಗಣ, ಕ್ಯಾಪ್ಸೂಲ್ ಗ್ಲಾಸ್ ಮಯ ಲಿಫ್ಟ್ ಅಳವಡಿಸಲಾಗಿದೆ. ಇದರಿಂದ ಕಾರ್ಯ ನಿಮಿತ್ತ ರಾಜ್ಯದಿಂದ ನವದೆಹಲಿಗೆ ಆಗಮಿಸುವ ರಾಜ್ಯದ ಮಂತ್ರಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳ ವಾಸ್ತವ್ಯಕ್ಕೆ ಸಹಾಯವಾಗಲಿದೆ. ನೂತನ ಅನೆಕ್ಸ್ ಕಟ್ಟಡ  ನಿರ್ಮಾಣದಿಂದ ರಾಜ್ಯದಿಂದ ಹೆಚ್ಚು ಸಂಖ್ಯೆಯ ಗಣ್ಯರು ಆಗಮಿಸಿದ ಸಂದರ್ಭದಲ್ಲಿ ಖಾಸಗಿ ಹೋಟೆಲ್‌ಗಳ ಅವಲಂಬನೆ ತಪ್ಪಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅಲ್ಲದೆ ರಾಜ್ಯದ ಸಂಸದರು ಬೆಂಗಳೂರಿಗೆ ಆಗಮಿಸಿದಾಗ ವಾಸ್ತವ್ಯಕ್ಕೆ ತೊಂದರೆಯಾಗುತ್ತಿದೆ ಎಂದು ರಾಜ್ಯಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಕಾರಣದಿಂದ ಬೆಂಗಳೂರಿನ ಜನರಲ್ ಹಾಸ್ಟೆಲ್ ಸ್ಥಳದಲ್ಲಿ ರಾಜ್ಯದ ಸಂಸದರಿಗೆ ವಾಸ್ತವ್ಯ ಕೊಠಡಿಗಳನ್ನು ನಿರ್ಮಿಸಲು ಸದ್ಯದಲ್ಲೆ ಕ್ರಮ ಕೈಗೊಳ್ಳಲಾಗುವುದು ಮತ್ತು ದೆಹಲಿಯಲ್ಲಿ ಸಂಸದರಿಗೆ ರಾಜ್ಯಸರ್ಕಾರದ ವತಿಯಿಂದ ಹೆಚ್ಚಿನ ಸೌಲಭ್ಯ ನೀಡಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಕೇಂದ್ರ ರೈಲ್ವೆ ರಾಜ್ಯಖಾತೆ ಸಚಿವ ಕೆ.ಎಚ್. ಮುನಿಯಪ್ಪ ರಾಜ್ಯಸರ್ಕಾರ ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳಿಗೆ ಕೇಂದ್ರ ಸರ್ಕಾರ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಸಮಾರಂಭದಲ್ಲಿ ಲೋಕೋಪಯೋಗಿ ಸಚಿವ ಸಿ.ಎಂ.ಉದಾಸಿ, ವಿಧಾನಪರಿಷತ್ ಸಭಾಧ್ಯಕ್ಷ ಡಿ.ಎಚ್.ಶಂಕರಮೂರ್ತಿ, ವಾರ್ತಾ ಸಚಿವ ಕಟ್ಟಾ ಸುಬ್ರಮಣ್ಯನಾಯ್ಡು, ದೆಹಲಿ ವಿಶೇಷ ಪ್ರತಿನಿಧಿ ದನಂಜಯ ಕುಮಾರ್, ದೆಹಲಿ ಹೆಚ್ಚುವರಿ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್, ನಿವಾಸಿ ಅಯುಕ್ತರಾಧ ಶ್ರೀಮತಿ ಇಂಕೋಂಗ್ಲಾ ಜಮೀರ್ ಸೇರಿದಂತೆ ಹಲವು ಸಂಸದರು ಹಾಗೂ ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳು, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ವಿ. ಗೋಪಿನಾಥ್, ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್.ರೇಣುಕುಮಾರ್ ಮತ್ತು ಸದಸ್ಯರುಗಳಾದ ಶ್ರೀ ಅಂಜನಿ ಗೌಡ, ಶ್ರೀ ವಿ.ವಿ. ಬಿರಾದಾರ ಮತ್ತು ಶ್ರೀ ಕೆ.ಎಸ್.ಜಿ. ಶೆಟ್ಟಿ ಅವರುಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಅನೆಕ್ಸ್ ಕಟ್ಟಡ ಉದ್ಘಾಟನಾ ಪೂರ್ವ ಪೂಜೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳು, ಸಂಪುಟದ ಸಚಿವರುಗಳು ಹಾಗೂ ಕರ್ನಾಟಕ ಭವನದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ

# ಸಂಘದಲ್ಲಿ ಶ್ರೀ ಎ.ಪಿ. ಕುಮಟಾಕರ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಯುತ ಎ.ಪಿ. ಕುಮಟಾಕರರವರ ನಿಧನದೊಂದಿಗೆ ನಾವೆಲ್ಲ ದೆಹಲಿ ಕರ್ನಾಟಕ ಸಂಘದ ಇನ್ನೊಂದು ಹಿರಿಯ ಚೇತನವನ್ನು ಕಳೆದುಕೊಂಡಂತಾಗಿದೆ. ದೆಹಲಿ ಕರ್ನಾಟಕ ಸಂಘವನ್ನು ಕಟ್ಟಿ ಬೆಳೆಸಿದ ಮಹನೀಯರಲ್ಲಿ ಅವರು ಪ್ರಮುಖರಾಗಿದ್ದರು. ಸಂಘದ ಅರವತ್ತಕ್ಕೂ ಮೀರಿದ ಇತಿಹಾಸದ ಪುಟಗಳಲ್ಲಿ ಅದನ್ನು ಓಲೈಸಿದ, ಬೆಳೆಯಿಸಿದ ಹಿರಿಯ ಚೇತನಗಳ ಸಾಲು ತುಂಬಾ ದೊಡ್ಡದು. ಐವತ್ತರ ದಶಕದಲ್ಲಿ ದೆಹಲಿ ಕರ್ನಾಟಕ ಸಂಘವೆಂಬ ವಿಚಾರವನ್ನು ಮೊಳೆಯಿಸಿ, ನಂತರ ಅದನ್ನು ಬೆಳೆಯಿಸಿದ ಹಿರಿಯರೆಲ್ಲ ಒಂದಲ್ಲ ಒಂದು ಬಗೆಯಲ್ಲಿ ನಮ್ಮಿಂದ ದೂರವಾಗಿದ್ದಾರೆ. ಅರವತ್ತರ ದಶಕದಲ್ಲಿ ಬಂದ ಡಾ|| ಸರೋಜಿನಿ ಮಹಿಷಿಯವರು, ಅಬಸಮರವರು, ಗೋಪಾಲ ಶಾಸ್ತ್ರಿಗಳು, ಕೆ.ಆರ್. ನಾಗರಾಜರವರು . . .ಹೀಗೆ ಈ ಸಾಲು ಬೆಳೆಯುತ್ತಾ ಹೋಗುತ್ತದೆ. ಈ ಸಾಲಿನಲ್ಲಿ ನಿಲ್ಲುವವರು ಶ್ರೀ ಎ.ಪಿ. ಕುಮಟಾಕರರವರು. ಅರವತ್ತರ ದಶಕದ ಮಧ್ಯಭಾಗದಲ್ಲಿ ದೆಹಲಿಗೆ ಬಂದ ದಿ|| ಕುಮಟಾಕರರವರು ಸರಕಾರಿ ಸೇವೆಯಲ್ಲಿದ್ದವರು. ಸ್ವತಂತ್ರ ಭಾರತದ ಅಭ್ಯುದಯದ ಕನಸಿನಲ್ಲಿ ಹೊಕ್ಕವರು. ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಬಳಿ ತೊಂಬತ್ತು ವಸಂತಗಳ ಹಿಂದೆ ಜನಿಸಿದ ಅವರು ಸ್ವತಂತ್ರ ಭಾರತದ ಆದರ್ಶದ ಮೊದಲ ಪೀಳಿಗೆ. ಈ ಆದರ್ಶಗಳ ಕನಸಿನೊಂದಿಗೆ ಸರಕಾರಿ ಸೇವೆಯನ್ನು ಸೇರಿ, ದೇಶದ ವಿವಿಧ ಭಾಗಗಳನ್ನು ಸುತ್ತಿ ಕೊನೆಗೆ ದೆಹಲಿಗೆ ಬಂದವರು. ತಮ್ಮ ಊರಾದ ಕುಮಟಾವನ್ನು ಎಷ್ಟೋ ದಶಕಗಳ ಹಿಂದೆ ತೊರೆದರೂ ಕುಮಟಾದ ಪರಿಸರ. . . "ಸಹ್ಯಾದ್ರಿಯ ಚಪ್ಪರ"ದ ತಂಪು ಅವರನ್ನು ಎಂದೂ ಬಿಡಲೇ ಇಲ್ಲ. ಅವರೊಬ್ಬ ಸರಳ, ಸುಂದರ ಕೊಂಕಣಿ ಕನ್ನಡಿಗರಾಗಿದ್ದರು. ಕೊಂಕಣಿ ಮನೆಮಾತಾಗಿದ್ದರೂ ಅವರು ಹಿಂದಿ, ಇಂಗ್ಲಿಷ್, ಮರಾಠಿ . . . ಇನ್ನೂ ಹಲವಾರು ಭಾರತೀಯ ಭಾಷೆಗಳಲ್ಲಿ ಪರಿಣಿತರಾಗಿದ್ದರು.

ಅರವತ್ತರ ದಶಕದಲ್ಲಿ ದೆಹಲಿಗೆ ಬಂದ ಮೇಲೆ, ಮೀನು ನೀರಿಗಿಳಿದಂತೆ, ಅವರಿಗೆ ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಹೆಚ್ಚು ಕಾಲ ಬೇಕಾಗಲಿಲ್ಲ. ರಾಮಕೃಷ್ಣ ಪುರಂನಲ್ಲಿ ಸ್ಥಾಪಿತವಾದ ದೆಹಲಿ ಕರ್ನಾಟಕ ಸಂಘದ ಆಗಿನ ಕಟ್ಟಡದ ಎಡೆಯಲ್ಲೇ ಅವರ ಸರ್ಕಾರಿ ವಾಸಸ್ಥಾನವಿತ್ತು. ಮೋತಿಬಾಗಿನ ಸರಕಾರಿ ಮನೆಯಲ್ಲಿ ಹಲವಾರು ವರ್ಷಗಳ ಕಾಲ ಇದ್ದವರು. ಅವರು ಹೀಗಾಗಿ ಎಡವಿ ಬಿದ್ದರೆ ದೆಹಲಿ ಕರ್ನಾಟಕ ಸಂಘ ಎಂಬಂತಾಯಿತು. ಕುಮಟಾಕರ ದಂಪತಿಗಳು ಆಗಿನ ವೇಳೆಯಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ನೀಡಿದ ಸೇವೆ. . . ಪ್ರೀತಿ. . . ಅಪಾರವಾದದ್ದು. ವಾರದಲ್ಲಿ ಹತ್ತಾರು ಬಾರಿ ಸಂಘಕ್ಕೆ ಬರುವುದು. . . ಬರುವಾಗ ಜೊತೆಯಲ್ಲಿ ತಿಂಡಿ-ತಿನಿಸುಗಳು. . .ಸಂಘದ ಕಾರ್ಯಕ್ರಮಗಳು. . . ಚರ್ಚೆಗಳು. . . "ತಾನು ಒಂದು ಬಗೆಯಲ್ಲಿ ಸಂಘದ ಕಾವಲುಗಾರನಾಗಿದ್ದೆ" ಎಂದು ದಿ|| ಕುಮಟಾಕರರವರೇ ನನ್ನೊಂದಿಗೆ ಹೇಳಿಕೊಂಡಿದ್ದಾರೆ.



ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಶ್ರೀ ಎ.ಪಿ. ಕುಮಟಾಕರ್ ಅವರಿಗೆ ದಿನಾಂಕ 22.08.2010ರಂದು ಸಂಘದಲ್ಲಿ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿತ್ತು.
ಹಿರಿಯ ಕನ್ನಡಿಗರಾದ ಐ. ರಾಮ ಮೋಹನ ರಾವ್, ಎನ್. ಜೆ. ಕಾಮತ್, ಸಾವಿತ್ರಿ ಶಾಸ್ತ್ರಿ, ಸುಮಿತ್ರ ರಾವ್, ಡಾ. ವೆಂಕಟಾಚಲ ಹೆಗಡೆ, ಎಸ್. ಕೃಷ್ಣ ಭಟ್, ಸಂಘದ ಅಧ್ಯಕ್ಷ ಶ್ರೀ ಸಿ.ವಿ. ಗೋಪಿನಾಥ್ ಕುಮಟಾಕರ್ ಅವರ ಸುಪುತ್ರ ಸೊಸೆ ಹಾಗೂ ಪುತ್ರಿ ಸಭೆಯಲ್ಲಿ ಹಾಜರಿದ್ದು ಶ್ರೀ ಕುಮಟಾಕರ್ ಅವರು ಕರ್ನಾಟಕಕ್ಕೆ ಹಾಗೂ ಕರ್ನಾಟಕ ಸಂಘಕ್ಕೆ ನೀಡಿದ ವಿಶೇಷ ಸೇವೆಯನ್ನು ನೆನಪಿಸಿಕೊಂಡು ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಎಪ್ಪತ್ತರ ಹಾಗೂ ಎಂಬತ್ತರ ದಶಕಗಳಲ್ಲಿ ದೆಹಲಿ ಕರ್ನಾಟಕ ಸಂಘ ಹಲವಾರು ಬಗೆಯ ಸ್ಥಿತ್ಯಂತರಗಳನ್ನು ಕಂಡಿತು. ಈ ಎಲ್ಲ ಚರ್ಚೆವಿಚರ್ಚೆಗಳ ನಡುವೆ. . .ಗೊಂದಲಗಳ ನಡುವೆ. . . ಹಾದು ಬಂದವರು ಶ್ರೀ ಕುಮಟಾಕರರವರು. ಎಂಬತ್ತರ ದಶಕದಲ್ಲಿ ಹಲವಾರು ವರುಷಗಳ ಕಾಲ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿ, ನಂತರ ಉಪಾಧ್ಯಕ್ಷರಾಗಿ ಕೆಲಸ ಮಾಡಿದರು. ಸಂಘದ ಏಳಿಗೆಗಾಗಿ ಆಗಿನ ಎಲ್ಲರೊಂದಿಗೆ ಹೆಗಲು ಕೊಟ್ಟು ಕೆಲಸ ಮಾಡಿದರು. ತೊಂಬತ್ತರ ದಶಕದಲ್ಲಿ ಅವರು ಸಂಘದ ಅಧ್ಯಕ್ಷರಾಗಿ ನಿಯುಕ್ತರಾಗಿ ಅದ್ಭುತವಾದ ಕೆಲಸವನ್ನು ಮಾಡಿ ತೋರಿಸಿದರು. ಅವರ ಕಾಲದಲ್ಲಿ ಪ್ರಧಾನ ಕಾರ್ಯದರ್ಶಿಗಳಾಗಿ ಶ್ರೀ ಎಸ್. ಕೃಷ್ಣಭಟ್ಟರು ಬಂದಿದ್ದು, ಅಭಿಮತವನ್ನು ಹುಟ್ಟು ಹಾಕಿ, ಸಂಪಾದಿಸುವ ಹೊಣೆ ಹೊತ್ತ ಹಲವು ಹಿರಿಯರು, ತರುಣರು. . . ಅದೊಂದು ಸಂಘದ ಸಂಕ್ರಮಣದ ಕಾಲದ ಎಂದರೆ ತಪ್ಪಾಗಲಾರದು. ಅವರ ಕಾಲದಲ್ಲೇ ಸಂಘದ ನಾಟಕೋತ್ಸವವೂ ಪ್ರಾರಂಭವಾಯಿತು.

ಅಧ್ಯಕ್ಷರಾಗಿ ಅವರು ದೆಹಲಿ ಕರ್ನಾಟಕ ಸಂಘದಿಂದ ಹೊರ ಬಂದರೂ 'ಕರ್ನಾಟಕ' ಅವರನ್ನು ಬಿಡಲಿಲ್ಲ. ಆಗಲೇ ಹೇಳಿದಂತೆ, ಊರಿನ ನೆನಪು ಅವರನ್ನು ಸದಾ ಕಾಡುತ್ತಿತ್ತು. ನಾನು ಸಹ ಉತ್ತರ ಕನ್ನಡದವನೇ ಆಗಿದ್ದರಿಂದ ಅವರಿಗೆ ನನ್ನೊಂದಿಗೆ ಊರಿನ ಬದಿಯ ಸುದ್ದಿ ಮಾತನಾಡುವ ತವಕ ತುಂಬಿರುತ್ತಿತ್ತು. ಕಾಡು-ಮೇಡು, ಗುಡ್ಡ-ಬೆಟ್ಟಗಳಿಂದ ತುಂಬಿದ ಉತ್ತರ ಕನ್ನಡ ಜಿಲ್ಲೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಂತೆ ಅಭಿವೃದ್ಧಿ ಪಥದತ್ತ ಸಾಗಿಸಬೇಕೆಂಬುದು ಅವರ ಆಶಯವಾಗಿತ್ತು. ತಾನು ಹುಟ್ಟಿ ಬೆಳೆದ ಊರಿಗೆ ಏನಾದರೂ ನೀಡಬೇಕು, ಮಾಡಬೇಕು ಎಂಬ ಅದಮ್ಯ ಆಕಾಂಕ್ಷೆ ಅವರದ್ದು. ಹೇಗೆ ಮಾಡಬಹುದು? ಏನು ಮಾಡಬಹುದು? ಎಂಬುದನ್ನು ಹಲವಾರು ಬಾರಿ ನನ್ನೊಂದಿಗೆ ಚರ್ಚಿಸಿದ್ದೂ ಇದೆ. ಆಗಿನ ವೇಳೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಪರಿಸರ ಕಾಳಗದಲ್ಲಿ ನಾವೆಲ್ಲ ತೊಡಗಿಕೊಂಡ ಕಾಲ, ಹಲವಾರು ಹಿರಿಯರು, ಶಿವರಾಮ ಕಾರಂತರು, ಹಾಗೂ ಇನ್ನಿತರರು ಉತ್ತರ ಕನ್ನಡ ಜಿಲ್ಲೆಯ ಪರಿಸರವನ್ನು ಕಾಯ್ದುಕೊಳ್ಳಲು ಹೋರಾಡುತ್ತಿದ್ದ ಕಾಲ ಹಲವಾರು ದೊಡ್ಡದೊಡ್ಡ ಯೋಜನೆಗಳು ಈ ಜಿಲ್ಲೆಗೆ ಬಂದು ಜನರ ಜನಜೀವನವನ್ನೇ ಅಸ್ತವ್ಯಸ್ಥಗೊಳಿಸಿದ್ದ ಕಾಲವದು. ಕಾರವಾರದ ಸೀಬರ್ಡ್ ಯೋಜನೆ, ಕಾಳಿನದಿ ಯೋಜನೆ, ಶರಾವತಿ ಯೋಜನೆ, ಕೈಗಾ ಅಣುಸ್ಥಾವರ, ಬೇಡತಿ ಯೋಜನೆ. . .ಹೀಗೆ ಬರೀ ಯೋಜನೆಗಳ ಸಾಲು. ಈ ಎಲ್ಲ ಯೋಜನೆಗಳಿಂದ ಜಿಲ್ಲೆಯ ಬಡ ಜನರಿಗೆ ಏನು ಉಪಯೋಗ? ಅಲ್ಲೆ ತಲೆತಲಾಂತರಗಳಿಂದ ಇದ್ದವರಿಗೆ ದೊರಕುವುದಾದರೂ ಏನು? ಈ ಎಲ್ಲ ವಾದಗಳನ್ನು ಒಪ್ಪಿಕೊಳ್ಳುವ ದಿ| ಕುಮಟಾಕರರವರು ಸ್ವತಃ ತಾವೇ ಕುಮಟಾಕ್ಕೆ ಹೋಗಿ ಹಲವಾರು ದಿನಗಳ ಕಾಲ, ಬಹುಶಃ ತಿಂಗಳುಗಳ ಕಾಲ ಉಳಿದುಕೊಂಡು, ಅಲ್ಲಿನ. . . ತಮ್ಮೂರಿನ ಜನರಿಗೆ ದೆಹಲಿಯ ಸರಕಾರದ

ಬೊಕ್ಕಸದಿಂದ ಹೊರಬೀಳುವ ಯೋಜನೆಗಳಲ್ಲಿ . . .ಅದರಲ್ಲೂ ಪರಿಸರವನ್ನು ಉಳಿಸಿಕೊಳ್ಳುವ ಯೋಜನೆಗಳನ್ನು ಹೇಗೆ ತಲುಪಿಸಬಹುದೆಂಬುದರ ಬಗ್ಗೆ ಕೆಲಸ ಮಾಡಿದ್ದರು.

ಇವರು ನಮ್ಮ ಕಳಕಳಿಯ ದಿ|| ಕುಮುಟಾಕರರವರು, ಏನಾದರೂ ಮಾಡಬೇಕು... ಏನಾದರೂ ಆಗಬೇಕು ಎಂಬ ತರಾತುರಿಯಲ್ಲೇ ಇರುವವರು. ತಮ್ಮ ಬದುಕಿನ ಕೊನೆಯ ಕ್ಷಣಗಳವರೆಗೂ ಈ ಬಗೆಯ ಕಳಕಳ ಅವರನ್ನೂ ಬಿಡಲೇ ಇಲ್ಲ. ಆರೋಗ್ಯ ಹದಗೆಟ್ಟಿದ್ದರೂ, ದೃಷ್ಟಿ ಮಂಜವಾಗಿದ್ದರೂ, ದೆಹಲಿ ಕರ್ನಾಟಕ ಸಂಘದ ಬಗ್ಗೆ, ದೆಹಲಿ ಕನ್ನಡ ಶಾಲೆಯ ಬಗ್ಗೆ ಹಾಗೂ ತಮ್ಮ ಇತರ ಚಟುವಟಿಕೆಗಳ ಬಗ್ಗೆ ಅವರು ಸದಾ ಜಾಗೃತರಾಗಿರುತ್ತಿದ್ದರು. "ಏನು ಮಾಡ್ತಾ ಇದ್ದೀರಿ. . .ಇದು ಯಾಕೆ ಆಗುದಿಲ್ಲ?. . .ನೀನು ಯಾಕೆ ಚುನಾವಣೆಗೆ ನಿಲ್ಲಬಾರದು?. . .ಬಾಕಿ ಎಲ್ಲ ಕೆಲಸ ಇರ್‍ತದೆ. . .ಇದನ್ನು ಮಾಡಬೇಕಪ್ಪ" ಎಂಬೆಲ್ಲಾ ಒತ್ತಾಸೆ. . .ಫೋನು ಮಾಡಿ ಮಾತನಾಡುವುದು. . .ಜನಸಮುದಾಯದೊಂದಿಗೆ ಸಮ್ಮಿಳಿತವಾಗಿ ಕೆಲಸ ಮಾಡುವ ಉತ್ಸಾಹದ ಪರಿ. ತಮ್ಮ ಶುದ್ಧ ಕೊಂಕಣಿ ಕನ್ನಡದಲ್ಲಿ ಮಾತನಾಡುತ್ತಿದ್ದರು. ಅವರು ಮಾತನಾಡುವ ಕನ್ನಡದ ಸೊಗಡನ್ನೇ ಕೇಳುವುದೇ ಒಂದು ಹಬ್ಬ. ಕರ್ನಾಟಕದ ಜನಜೀವನದ, ಒಂದು ಸಂಸ್ಕೃತಿಯ ಅಂಗವಾಗಿ ಅವರು ದೆಹಲಿಯಲ್ಲಿ ಬದುಕಿದ್ದರು. ದೆಹಲಿಯ ಕೊಂಕಣಿ ಸಂಘದೊಂದಿಗೂ ಅಷ್ಟೇ ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು. ಅವರ ಕಾಲದಲ್ಲೇ ಸಂಘವು ದೆಹಲಿಯ ಕೊಂಕಣಿ ಅಸೋಸಿಯೇಶನ್ ಜೊತೆ ಸೇರಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದ್ದನ್ನು ಇಲ್ಲಿ ನೆನಪಿಸಬಹುದು.

ನಾನು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಲದಲ್ಲಿ ಸಂಘದ ನೂತನ ಕಟ್ಟಡದ ರೂಪರೇಷೆಗಳ ಯೋಜನೆಯೂ ಪ್ರಾರಂಭವಾಗಿತ್ತು. ಎಲ್ಲರಿಗೂ ಒಂದು ಬಗೆಯ ಉತ್ಸಾಹ. . .ಹಾಗೆಯೇ ಚಿಂತೆ ಕೂಡಾ. ಇದ್ದ ಕಟ್ಟಡವನ್ನು ಕೆಡವಿ, ನೂತನ ಸಭಾಂಗಣವನ್ನು ನಿರ್ಮಿಸಿಕೊಳ್ಳುವುದೇ? ಸುಮಾರು ಒಂದು ವರುಷಗಳ ಇದೇ ಚರ್ಚೆ ಸಂಘದಲ್ಲಿ ನಡೆಯಿತು. ಇವೆಲ್ಲದಕ್ಕೂ ಹಣ ಎಲ್ಲಿಂದ ಬರಬಹುದು? ಇದೆಲ್ಲ ನಮ್ಮಿಂದ ಸಾಧ್ಯವಾಗಬಹುದೇ?. . . ಎಂಬೆಲ್ಲ ಚರ್ಚೆಯಲ್ಲಿ ಆಗಿನ ಅಧ್ಯಕ್ಷ ದಿ|| ಶ್ರೀ ಕೆ.ಆರ್. ನಾಗರಾಜರವರೊಂದಿಗೆ ಹೆಗಲು ಕೊಟ್ಟು ಕೆಲಸ ಮಾಡಿದವರು ಶ್ರೀ ಕುಮಟಾಕರವರು. ಸಂಘಕ್ಕೆ ನೂತನ ಸಭಾಂಗಣವಾಗಬೇಕೆಂಬ ವಿಚಾರಕ್ಕೆ ಹಾಗೂ ನಡೆದ ಸರ್ವ ಸದಸ್ಯರ ಸಭೆಯಲ್ಲಿನ ಚರ್ಚೆಯನ್ನು ನಡೆಸಿಕೊಟ್ಟ ಖ್ಯಾತಿ ದಿ|| ಕುಮುಟಾಕರರವರಿಗೆ ಸಲ್ಲಬೇಕು. ಆಗ ಸದಸ್ಯರಲ್ಲಿ ಇದ್ದ ಎಲ್ಲ ಅಭಿಪ್ರಾಯಗಳನ್ನೂ ಒಗ್ಗೂಡಿಸಿ, ದೆಹಲಿ ಕರ್ನಾಟಕ ಸಂಘಕ್ಕೆ ಹೊಚ್ಚ ಹೊಸತಾದ ಸಭಾಂಗಣವಾಗಬೇಕೆಂಬ ಯೋಜನೆಯನ್ನು ಒಮ್ಮತದಿಂದ ಒಪ್ಪಿಕೊಳ್ಳುವಂತಾಯಿತು. ಅದಕ್ಕಾಗಿ ಬೇಕಾದ ಹಣ ರೂಪರೇಷೆಗಳನ್ನೂ ಆ ಕಾಲದಲ್ಲೇ ಒಂದು ಯೋಜನೆಯ ರೂಪದಲ್ಲಿ ಸಿದ್ಧಪಡಿಸಲಾಯಿತು. ಇಂದಿನ ಸಂಘದ ಸಭಾಂಗಣದ ಕನಸನ್ನು ಸಾಕಾರಗೊಳಿಸಲು ಹಲವಾರು ಹಿರಿಯರು ಸೊಂಟಕಟ್ಟಿ ದುಡಿದಿದ್ದಾರೆ. ಅವರಲ್ಲಿ ದಿ|| ಕುಮುಟಾಕರವರ ಕಾಣಿಕೆಯನ್ನು ನೆನಪಿಸಿಕೊಳ್ಳಬೇಕು.

ನಂತರದಲ್ಲಿ ಅವರು ಸಂಘದ ಕಾರ್ಯಕ್ರಮಗಳಲ್ಲಿ ಆಗಾಗ್ಗೆ ಭಾಗವಹಿಸುತ್ತಿದ್ದರು. ಆರೋಗ್ಯ ನಿಧಾನವಾಗಿ ಕ್ಷೀಣಿಸುತ್ತಿದ್ದುದು ಇದಕ್ಕೆ ಕಾರಣವಾಗಿತ್ತು. ಆದರೂ ತಮ್ಮ ಬದುಕಿನ ಕೊನೆಯ ಗಳಿಗೆಯವರೆಗೂ ಜನಸಮುದಾಯದ ಹಿತಾಸಕ್ತಿ, ಉನ್ನತಿಗಳ ಬಗ್ಗೆ ಅವರು ಕೆಲಸ ಮಾಡುತ್ತ ನಡೆದರು.

ತಮ್ಮ ಜೀವನದ ಕೊನೆಯ ಕ್ಷಣಗಳನ್ನು ಅದ್ಭುತವಾಗಿ ಸ್ಪಂದಿಸುತ್ತಲೇ ಅವರು ನಮ್ಮಿಂದ ದೂರವಾದರು. ತಮ್ಮ ಶರೀರವನ್ನು ವೈದ್ಯಕೀಯ ಕಲಿಕೆ ಹಾಗೂ ಪರೀಕ್ಷೆಗಾಗಿ ಅರ್ಪಿತಗೊಳಿಸಿಕೊಂಡರು. ಅವರ ಇಚ್ಛೆಯಂತೆ ಅವರ ಶರೀರವನ್ನು ಅಖಿಲ ಭಾರತೀಯ ವೈದ್ಯ ಸಂಸ್ಥಾನಕ್ಕೆ ಸಂಶೋಧನೆಗಾಗಿ ನೀಡಲಾಯಿತು. ಅವರು ನಿಜವಾಗಿಯೂ ಮಹಾನುಭಾವಿಗಳು. ಸಾವಿನಲ್ಲೂ, ಸಾವಿನ ನಂತರವೂ ತಮ್ಮ ಸೇವೆಯ ಬದುಕಿನ ಎಚ್ಚರದ ಭಾವನೆಗಳನ್ನು ಬಿಡಲಿಲ್ಲ. ಈ ಚೇತನಕ್ಕೆ ನಮೋನಮಃ ಅವರ ಭಾವನೆಗಳು . . .ಪ್ರೀತಿ. . .ಸಂಘದ ಮೇಲೆ, ದೆಹಲಿ ಕನ್ನಡ ಶಾಲೆಯ ಮೇಲೆ . . .ಸಮಸ್ತ ಕನ್ನಡ ಸಮುದಾಯದ ಮೇಲೆ ಇರಲಿ ಎಂದು ಹಾರೈಸುತ್ತ ಅವರಿಗೆ ಈ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ.

**■ ಡಾ. ವೆಂಕಟಾಚಲ ಹೆಗಡೆ**

# "ಕೀರಂ"ಗೆ ಅಂತಿಮ ನಮನ



ಕನ್ನಡದ ಹಿರಿಯ ವಿದ್ವಾಂಸ ಕೀ ರಂ. ನಾಗರಾಜ ಅವರ ನಿಧನಕ್ಕೆ ದೆಹಲಿ ಕರ್ನಾಟಕ ಸಂಘವು 15.08.2010ರಂದು ತನ್ನ ನುಡಿ ನಮನ ಸಲ್ಲಿಸಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಡಾ. ಪುರುಷೋತ್ತಮ ಬಿಳಿಮಲೆಯವರು ಸಂದರ್ಭೋಚಿತವಾಗಿ ಮಾತಾಡಿ ' ಕೀ ರಂ ಗೆ ಸಾಯುವ ವಯಸ್ಸೇನೂ ಆಗಿರಲಿಲ್ಲ. ಹಾಗಾಗಿ ಅವರ ಸಾವು ಒಂದು ಬಗೆಯ ವಿಷಾದವನ್ನು ನಾಡಿನ ಎಲ್ಲೆಡೆ ಹರಡಿದೆ' ಎಂದು ಹೇಳಿ ಕೀ ರಂ ನಮ್ಮ ನಡುವೆ ಹೇಗೆ ದೊಡ್ಡ ಶಕ್ತಿಯಾಗಿದ್ದರು ಎಂದು ಎಳೆ ಎಳೆಯಾಗಿ ವಿವರಿಸಿದರು. 'ಕನ್ನಡ ವಿಶ್ವವಿದ್ಯಾಲಯದಲ್ಲಿ ಅವರು ನನ್ನ ಸಹೋದ್ಯೋಗಿಯಾಗಿದ್ದರು, ಅವರ ಪತ್ನಿ ದಿವಂಗತ ಶ್ರೀಮತಿ ವಿಜಯಲಕ್ಷ್ಮಿಯವರು ಕೂಡಾ ಕವಿಯಾಗಿದ್ದು ಅನುವಾದಗಳಿಂದ ಪ್ರಸಿದ್ಧರಾಗಿದ್ದರು, ಅವರ ಮೂವರು ಮಕ್ಕಳು ಕೂಡಾ ಸಂವೇದನಾಶೀಲರು. ಕೀ ರಂ ತುಂಬಾ ಸರಳ ಜೀವನಕ್ಕೆ ಒಗ್ಗಿ ಕೊಂಡಿದ್ದರು, ಯಾರು ಕಾರ್ಯಕ್ರಮಗಳಿಗೆ ಕರೆದರೂ, ಸರಳವಾದ ಜುಬ್ಬ ಹಾಕಿ, ಹೆಗಲಿಗೆ ಒಂದು ಚೀಲವನ್ನು ಏರಿಸಿಕೊಂಡು, ಕೆಂಪು ಬಸ್ಸಿನಲ್ಲಿ ಕರ್ನಾಟಕದ ಮೂಲೆ ಮೂಲೆಗಳಿಗೆ ಪ್ರಯಾಣಿಸುತ್ತಿದ್ದರು. ಸಾಹಿತ್ಯ ಅದರಲ್ಲೂ ಕಾವ್ಯದ ಬಗ್ಗೆ ಅವರಿಗೆ ಖಚಿತ ತಿಳುವಳಿಕೆ ಇತ್ತು, ಆ ವಿಷಯದಲ್ಲಿ ಅವರು ಯಾವುದೇ ರಾಜಿಗೆ ಸಿದ್ಧರಿರಲಿಲ್ಲ. ಅವರು ಬರೆದದ್ದು ಕಡಿಮೆ, ಮಾತಾಡಿದ್ದು ಜಾಸ್ತಿ. ಅವರ ಶಿಷ್ಯರೆಲ್ಲ ಮನಸ್ಸು ಮಾಡಿ ಈ ಹೊತ್ತಿನಲ್ಲಾದರೂ ಕೀ ರಂ ಭಾಷಣಗಳನ್ನು ಸಂಗ್ರಹಿಸಿದರೆ, ಅದರಿಂದ ವಿಮರ್ಶಾ ಕ್ಷೇತ್ರಕ್ಕೆ ದೊಡ್ಡ ಲಾಭವಾದೀತು. ಚೀಲದಲ್ಲಿ ಕಾವ್ಯ ಕೃತಿಗಳನ್ನು ತುಂಬಿಕೊಂಡು ಓಡಾಡುವ ಅಪೂರ್ವ ವ್ಯಕ್ತಿಯೊಂದನ್ನು ನಾವು ಶಾಶ್ವತವಾಗಿ ಕಳೆದುಕೊಂಡು ಬಿಟ್ಟೆವು. ಅವರ ನಿಧನದ ಮೂಲಕ ಹಳೆಕನ್ನಡ, ನಡು ಕನ್ನಡ ಮತ್ತು ಹೊಸಕನ್ನಡಕ್ಕಿದ್ದ ಬೆಳಕಿಂಡಿಯೊಂದು ಶಾಶ್ವತವಾಗಿ ನಂದಿ ಹೋಯಿತು. 16–17–18 ನೇ ಶತಮಾನವನ್ನು ಸಾಹಿತ್ಯ ಚರಿತ್ರೆಕಾರರು 'ಕತ್ತಲೆಯ ಯುಗ ಎಂದು' ಕರೆದಾಗ ಕೀ ರಂ ಅವರು ತತ್ವ ಪದಗಳನ್ನು ಮುಂದೆ ಮಾಡಿ ಆ ಕಾಲ ಹೇಗೆ ಹೊಸ ಬೆಳಕಿನ ಕಾಲ ಎಂದು ಸಾಬೀತು ಪಡಿಸಿ, ನಮ್ಮ ತಿಳುವಳಿಕೆಗೆ ಹೊಸ ದಾರಿ ತೋರಿಸಿದರು'

ಪಂಪ–ಕುಮಾರವ್ಯಾಸ–ಬೇಂದ್ರೆಯರನ್ನು ಓದುತ್ತಿದ್ದ ಅವರು ಅದೇ ಕ್ಷಣದಲ್ಲಿ ತಾಳ ಮದ್ದಳೆಗೆ ಕಿವಿಕೊಡುತ್ತಿದ್ದರು, ಮೈಲಾರಲಿಂಗ ಜಾತ್ರೆಗೆ ಹೋಗುತ್ತಿದ್ದರು, ಹುಲಿಗೆಮ್ಮನ ಪಾಯಸ ಪವಾಡವನ್ನು ನೋಡುತ್ತಿದ್ದರು, ಈ ಅರ್ಥದಲ್ಲಿ ಸಂಸ್ಕೃತಿಯನ್ನು ಇಡಿಯಾಗಿ ಪರಿಭಾವಿಸಲು ಅವರು ನಿರಂತರವಾಗಿ ಶ್ರಮಿಸುತ್ತಿದ್ದರು, ನಮ್ಮಲ್ಲಿ ಹಲವರಿಗೆ ಈ ಬಗೆಯ ದೃಷ್ಟಿಕೋನವೇ ಇರದ್ದರಿಂದ ನಾವು ಸಂಕುಚಿತಗೊಂಡಿದ್ದೇವೆ, ಕೀ ರಂ ಎಂದೂ ಸಂಕುಚಿತ ಮನಸ್ಸಿನವರಾಗಿರಲಿಲ್ಲ. ಅವರಲ್ಲಿ ದಾರ್ಶನಿಕತೆಯಿತ್ತು' ಎಂದು ಹೇಳಿದ ಬಿಳಿಮಲೆಯರು ' ಅವರೊಡನೆ ಕಳೆದ ಅನೇಕ ಘಟನೆಗಳನ್ನು ನೆನಪಿಸಿಕೊಂಡು ಸಂಘಕ್ಕೆ ಅವರನ್ನು ಬರಮಾಡಿಕೊಂಡು, ಅವರ ಭಾಷಣ ಕೇಳುವ ಆಸೆ ಹಾಗೆಯೇ ಉಳಿದು ಹೋಯಿತು ಎಂದು' ವಿಷಾದ ವ್ಯಕ್ತ ಪಡಿಸಿದರು.

ಸಂಘದ ಉಪಾಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಕೀ ರಂ ನಿಧನಕ್ಕೆ ಶೋಕ ಪ್ರಕಟಿಸಿ, ಸೇರಿದ ಎಲ್ಲರೂ ಅಗಲಿದ ಸಾಹಿತಿಗೆ ಪುಷ್ಪಾಂಜಲಿ ಅರ್ಪಿಸಿ, ಶ್ರದ್ಧಾಂಜಲಿ ಸಲ್ಲಿಸಲು ಕೋರಿದರು. ಉಪಸ್ಥಿತರೆಲ್ಲರೂ ಪುಷ್ಪವೇರಿಸಿ ನಮನ ಸಲ್ಲಿಸಿದರು. ಎಲ್ಲರೂ ಅವರ ಆತ್ಮ ಶಾಂತಿ'ಗಾಗಿ ಎರಡು ನಿಮಿಷಗಳ ಮೌನವನ್ನಾಚರಿಸಿ ಪ್ರಾರ್ಥನೆ ಸಲ್ಲಿಸಿದರು.

**■ ಡಾ. ಸುಮಂಗಲಾ ದೇವಿ**

# ನಾ ಸತ್ತಿಲ್ಲ : ಐತಿಹಾಸಿಕ ಹಿನ್ನೆಲೆಯ ನಾ

ರಾಷ್ಟ್ರದ ರಾಜಧಾನಿಯಲ್ಲಿರುವ ದೆಹಲಿ ಕರ್ನಾಟಕ ಸಂಘದ ರಂಗಮಂಟಪದಲ್ಲಿ ಅಗಸ್ಟ್ 1, 2010ರಂದು ಸಾಯಂಕಾಲ ವಿಜಾಪುರದ ಪ್ರಸಿದ್ಧ ನಾಟಕಕಾರ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ರಚಿಸಿದ 'ನಾ ಸತ್ತಿಲ್ಲ' ಎಂಬ ಐತಿಹಾಸಿಕ ಘಟನೆ ಹಿನ್ನೆಲೆಯಲ್ಲಿ ನಾಟಕಕಾರನ ಕಲ್ಪನೆಯಿಂದ ರಚಿಸಿದ ಸುಂದರವಾದ ನಾಟಕದ ಪ್ರದರ್ಶನ ನಡೆಯಿತು. ಈ ನಾಟಕವನ್ನು ಶ್ರೀ ಶಿವಾನಂದ ಇಂಗಳೇಶ್ವರ ಅವರು ನಿರ್ದೇಶಿಸಿದರು.

ಸಮಯಕ್ಕೆ ಸರಿಯಾಗಿ ನಾಟಕ ಆರಂಭವಾಯಿತು. ನ್ಯಾಯಾಧೀಶರು ಆಗಮಿಸಿ ತಮ್ಮ ಆಸನದಲ್ಲಿ ಆಸೀನರಾದರು. ವಾದಿ ಮತ್ತು ಪ್ರತಿವಾದಿ ವಕೀಲರುಗಳು ನ್ಯಾಯಾಲಯದಲ್ಲಿ ತಮ್ಮ ಹಾಜರಾತಿ ನೀಡುವರು. ನ್ಯಾಯಾಧೀಶರು ನ್ಯಾಯಾಲಯದ ಗುಮಾಸ್ತನನ್ನು ಉದ್ದೇಶಿಸಿ ವಾದಿ ಪ್ರತಿವಾದಿಗಳು ನ್ಯಾಯಾಲಯದಲ್ಲಿ ಹಾಜರಾಗುವಂತೆ ತಿಳಿಸಲು ಆದೇಶಿಸಿದರು. ಗುಮಾಸ್ತನು ನ್ಯಾಯಾಲಯದ ನಿಯಮಗಳಂತೆ ವಾದಿಯನ್ನು ಕಟಕಟೆಯಲ್ಲಿ ವಿನಂತಿ ಪೂರ್ವಕವಾಗಿ ನಿಲ್ಲುವಂತೆ ಹೇಳುವನು. ವಾದಿ ಸತ್ಯವಂತರಾವ್ ದೇಶ್‌ಮುಖ್ ಹಾಗೂ ಪ್ರತಿವಾದಿ ಧನವಂತರಾವ್ ದೇಶ್‌ಮುಖ್ ಇವರಿಬ್ಬರೂ ಒಡಹುಟ್ಟಿದ ಸಹೋದರರು. ವಿವೇಕರಾವ್ ಅನ್ನುವವರು ಸತ್ಯವಂತರಾವ್ ಅವರ ಪರವಾಗಿ ವಾದಿಸುವ ವಕೀಲ. ಅದರಂತೆ ಬಂಡೇರಾವ್ ಅನ್ನುವವರು ಪ್ರತಿವಾದಿಯಾದ ಧನವಂತರಾವ್ ಅವರ ಪರವಾಗಿ ನ್ಯಾಯಾಲಯದಲ್ಲಿ ವಾದಿಸುವ ವಕೀಲ.

ನ್ಯಾಯಾಲಯದ ಕಟಕಟೆಯಲ್ಲಿ ನಿಂತ ಸತ್ಯವಂತರಾವ್‌ನ ವಿಚಾರಣೆ ಆರಂಭವಾಗುವುದು. ಪ್ರತಿವಾದಿ ವಕೀಲ ಬಂಡೇರಾವ್‌ನು ಸತ್ಯವಂತರಾವ್ ಸತ್ತಿರುವನು ಎಂದು ಸಾಕ್ಷಾಧಾರಗಳ ಮೂಲಕ ನ್ಯಾಯಾಲಯದಲ್ಲಿ ಸಾಬೀತು ಪಡಿಸಲು ಯತ್ನಿಸುವನು. ಅದರಂತೆ ವಿವೇಕರಾವ್ ತನ್ನ ಕಕ್ಷಿದಾರ ಸತ್ಯವಂತರಾವ್ ಜೀವಂತವಾಗಿ ನ್ಯಾಯಾಲಯದಲ್ಲಿ ಹಾಜರಿದ್ದುದರಿಂದ ಅವರು ಸತ್ತಿಲ್ಲವೆಂದು ವಾದಿಸುವರು. ಪ್ರತ್ಯಕ್ಷ ಹಾಜರಾತಿಯಿಂದ ಮಾತ್ರ ಒಬ್ಬ ವ್ಯಕ್ತಿ ಸತ್ತಿಲ್ಲ ಎಂದು ಹೇಳುವುದು ಸುಳ್ಳು ಎಂದು ಪ್ರತಿವಾದಿ ವಕೀಲರು ವಾದಿಸುವರು. ವಾದ ವಿವಾದ ನಡೆಯುತ್ತಿದ್ದಂತೆ ನ್ಯಾಯಾಧೀಶರು ಬಂಡೇರಾವ್‌ನನ್ನು ಉದ್ದೇಶಿಸಿ ನ್ಯಾಯಾಲಯದಲ್ಲಿ ಹಾಜರಿದ್ದ ಸತ್ಯವಂತರಾವ್ ಅವರು ಸತ್ತಿರುವರು ಎನ್ನಲು ಸಾಕ್ಷಾಧಾರಗಳು ತಮ್ಮಲ್ಲಿ ಇದ್ದರೆ ಹಾಜರುಪಡಿಸಲು ಆಜ್ಞಾಪಿಸುವರು. ಪ್ರತಿವಾದಿ ಪರ ಸಾಕ್ಷಿ ಹೇಳಲು ಪ್ರಚಂಡಾಚಾರ ಎಂಬ ಶಾಸ್ತ್ರಿಗಳು ಹಾಜರಾಗಿ ಧರ್ಮಶಾಸ್ತ್ರದ ಹಾಗೂ ಸಮಾಜದ ನೀತಿ–ನಡುವಳಿಕೆ ಪ್ರಕಾರ ಸತ್ಯವಂತರಾವ್ ಅವರು ಸತ್ತಿರುವರಾಗಿರುವುದರಿಂದ ಅವರ ಮರಣೋತ್ತರ ದಿನ–ಕರ್ಮ ಮುಗಿಸಿರುವ ವಿಷಯ ತಿಳಿಸುವರು. ಅಲ್ಲದೇ ಸತ್ಯವಂತರಾವ್ ಅವರ ಪತ್ನಿ ಶಾಂತಾಬಾಯಿ ಅವರಿಗೆ ವಿಧವಾ ಸಂಸ್ಕಾರ ಮಾಡಿಸಿದ ವಿಷಯವನ್ನೂ ನ್ಯಾಯಾಲಯಕ್ಕೆ ತಿಳಿಸುವರು. ನಾಟಕದ ವಿಚಿತ್ರತೆ ಅಂದರೆ ಶಾಸ್ತ್ರಿಗಳು ಸತ್ಯವಂತರಾವ್ ಅವರನ್ನು ಪೂರ್ಣವಾಗಿ ಗುರುತಿಸುವರು. ಆದರೆ ಶಾಸ್ತ್ರದ ಪ್ರಕಾರ ಅವರು ಸತ್ತಿರುವರು ಎನ್ನುವರು. ನ್ಯಾಯಾಲಯದಲ್ಲಿ ಜೀವಂತವಾಗಿ ನಿಂತಿರುವ ಸತ್ಯವಂತರಾವ್ ಅವರಿಗೆ ಶಾಸ್ತ್ರಿಗಳ ಮಾತುಗಳಿಂದ ನೊಂದುಕೊಳ್ಳುವರು ಹಾಗೂ ಹತಾಶರಾಗಿ ಅವರ ವಿರುದ್ಧ ಆಕ್ರೋಶದಿಂದ ಚೀರುವರು. ಮಧ್ಯ ಮಧ್ಯೆ ವಾದಿ ಪ್ರತಿವಾದಿ ವಕೀಲರುಗಳು ತಮ್ಮ ಕಕ್ಷಿದಾರರನ್ನು ಸಮರ್ಥಿಸಲು ನ್ಯಾಯಾಲಯದಲ್ಲಿ ವಾದಿಸುವರು. ವಿವೇಕರಾವ್ ಅವರು ಪ್ರಚಂಡಾಚಾರರು ಸಿಟ್ಟಾಗುವಂತೆ ಅವರಿಗೆ ಮಾತನಾಡುವರು.

ಪ್ರತಿವಾದಿ ಪರವಾಗಿ ಪ್ರಚಂಡಾಚಾರರ ಸಾಕ್ಷಿ ಹೇಳಿದ ಕೂಡಲೇ ಸತ್ಯವಂತರಾವ್ ಅವರ ಪರ ಸಾಕ್ಷಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ವಿವೇಕರಾವ್ ಅವರು ನ್ಯಾಯಾಧೀಶರ ಅನುಮತಿಯನ್ನು ಪಡೆಯುವರು. ಸತ್ಯವಂತರಾವ್ ಅವರ ಮನೆಯ ಆಳು ಬೀರಪ್ಪ ಬೀರಲದಿನ್ನೆ ನ್ಯಾಯಾಲಯದಲ್ಲಿ ಹಾಜರಾಗಿ ಎದುರಿನ ಕಟೆಕಟೆಯಲ್ಲಿದ್ದ ಧಣಿ ಸತ್ಯವಂತರಾವ್ ಅವರನ್ನು ಗುರುತಿಸುವನು. ಅವನ ಮುಗ್ಧ ಮಾತು ಧನವಂತರಾವ್‌ನ ಕುಟಿಲತೆ ಬಯಲಿಗೆಯಲು ಆಗುವುದಿಲ್ಲ. ಆದರೆ ಪ್ರತಿವಾದಿ ವಕೀಲ ಬಂಡೇರಾವ್ ಬೀರಪ್ಪನ ಹೇಳಿಕೆಗಳಿಗೆ ನ್ಯಾಯಾಲಯ ಮಾನ್ಯ ಮಾಡದಂತೆ ವಿನಂತಿಸುವನು.

ವಾದಿ ಪ್ರತಿವಾದಿಗಳ ಸಾಕ್ಷಿಗಳು ದಾಖಲಾದ ಮೇಲೆ ಮುಖ್ಯ ಪ್ರತಿವಾದಿ ಧನವಂತರಾವ್ ಅವರ ವಿಚಾರಣೆ ಮಾಡಲು ನ್ಯಾಯಾಧೀಶರ ಅನುಮತಿಯನ್ನು ವಿವೇಕರಾವ್ ಅವರು ಕೇಳಿ ಪಡೆಯುವರು. ಶ್ರೀಮಂತಿಕೆಯ ಸೊಕ್ಕಿನಿಂದ ಬೀಗುತ್ತ ಧನವಂತರಾವ್ ನ್ಯಾಯಾಲಯದ ಕಟಕಟೆಯಲ್ಲಿ ಹಾಜರಾಗುವನು. ವಕೀಲ ವಿವೇಕರಾವ್‌ರು ಧನವಂತರಾವ್ ಅವರ ವಿಚಾರಣೆ ಆರಂಭಿಸುವರು. ಸಂಪತ್ತಿನಿಂದ ಬೀಗುತ್ತಿರುವ ಧನವಂತರಾವ್ ನಾಟಕೀಯವಾಗಿ ಅಣ್ಣನ ಬಗ್ಗೆ ತನಗಿರುವ ಕಳಕಳಿ ಹಾಗೂ ದುಃಖವನ್ನು ನ್ಯಾಯಾಲಯದಲ್ಲಿ ಹೇಳುವನು. ಸತ್ಯವಂತರಾವ್ ಅವರು ಮಹಾನ್ ರಾಷ್ಟ್ರಭಕ್ತರಾಗಿದ್ದು ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಊರಲ್ಲಿ ಅಗಸ್ಟ್ 15, 1947ರಂದು ತ್ರಿವರ್ಣ ಧ್ವಜವನ್ನು ಹಾರಿಸಿ ಜನರಿಗೆಲ್ಲಾ ಸಿಹಿ ಹಂಚಿದರು. ಮಹಾತ್ಮರ ಅನುಯಾಯಿಯಾದ ಸತ್ಯವಂತ ರಾವ್ ಮಹಾನ್ ದೇಶಭಕ್ತ ಮುಂತಾಗಿ ಹೇಳುವನು. ಆದರೆ ಜೀವಂತವಾಗಿ ನ್ಯಾಯಾಲಯದಲ್ಲಿ ತನ್ನ ಎದುರಿನ ಕಟಕಟೆಯಲ್ಲಿ ನಿಂತಿದ್ದ ಹಿರಿಯಣ್ಣ ಸತ್ಯವಂತರಾವ್ ತನಗೆ ಗೊತ್ತಿಲ್ಲವೆಂದು ಹೇಳುವನು. ಧನವಂತರಾವ್ ಅವರ ವಿಚಾರಣೆ ಮಾಡುತ್ತಿರುವ ವಿವೇಕರಾವ್ ಅವರಿಗೆ ಪ್ರತಿವಾದಿ ವಕೀಲ ಬಂಡೇರಾವ್ ಮಧ್ಯ ಅಡ್ಡಿ ಮಾಡಲು ಯತ್ನಿಸುವನು. ಮಹಾನ್ ಸ್ವಾರ್ಥಿಯಾಗಿದ್ದ ಧನವಂತರಾವ್ ಒಡಹುಟ್ಟಿದ ಅಣ್ಣನ ಆಸ್ತಿಯನ್ನು ಪೂರ್ಣವಾಗಿ ತನ್ನದಾಗಿಸಿಕೊಳ್ಳಲು ಕುಟಿಲ ನೀತಿಯಿಂದ ಪತ್ರಿಕೆಗಳಲ್ಲಿ ಸತ್ಯವಂತರಾವ್ ಕಾಣೆಯಾದ ಹಲವಾರು ಪ್ರಕಟಣೆಗಳನ್ನು ಹೊರಡಿಸಿ ಅವುಗಳನ್ನು ನ್ಯಾಯಾಲಯದಲ್ಲಿ ಸಾಕ್ಷಾಧಾರಗಳಾಗಿ ಹಾಜರು ಪಡಿಸುವನು. ಏಳು ವರ್ಷ ಒಬ್ಬ ವ್ಯಕ್ತಿ ಕಾಣೆಯಾದರೆ ಅವನು ಕಾನೂನು ಪ್ರಕಾರ



ಎಲ್ಲಾ ಹಕ್ಕುಗಳನ್ನು ಕಳೆದುಕೊಳ್ಳುವನು. ಅದನ್ನು ಧನವಂತರಾವ್ ತನ್ನ ವಕೀಲನ ಮುಖಾಂತರ ಸತ್ಯವಂತರಾವ್ 14 ವರ್ಷಗಳಿಂದ ಕಾಣೆಯಾದುದರಿಂದ ಎರಡು ಬಾರಿ ಸತ್ತಿರುವನು ಎಂದು ವಾದಿಸುವನು. ಅಂತಿಮವಾಗಿ ವಿವೇಕರಾವ್ ಅವರು ಸತ್ಯವಂತರಾವ್ ಅವರನ್ನು 'ತಾವು ಈ ಹದಿನಾಲ್ಕು ವರ್ಷಗಳ ಕಾಲ ಎಲ್ಲಿ ಮಾಯವಾಗಿದ್ದಿರಿ' ಎಂದು ಕೇಳಿದಾಗ ನಡೆದ ನಿಜ ಸಂಗತಿಂಯುನ್ನು ನ್ಯಾಂಯಾಲಂಯುದ ವುುಂದೆ ಹೇಳುವನು. 1948ರ ಜನವರಿ ಮೂರನೇ ವಾರ ಮಹಾತ್ಮ ಗಾಂಧೀ ಅವರನ್ನು ಕಾಣಲು ನವದೆಹಲಿಗೆ ಹೋದೆ. ಅಲ್ಲಿ ಅವರ ದರ್ಶನ ಪಡೆದು ಪ್ರತಿದಿನ ಅಲ್ಲಿ ನಡೆಯುವ



ನಾಟಕದ ನಂತರದ ಚರ್ಚೆಯಲ್ಲಿ ನಾಟಕಕಾರ

# ಾಟಕದ ಪ್ರದರ್ಶನ

ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸುತ್ತಿದ್ದೆ. ಜನವರಿ 30, 1948ರಂದು ಮಹಾತ್ಮರ ಹತ್ಯೆಯಾಯಿತು. ಅವರ ಹತ್ಯೆಯ ಸಂದರ್ಭದಲ್ಲಿ ನಾನೂ ಅಲ್ಲಿಯೇ ಇದ್ದೆ. ಸುದೈವದಿಂದ ನನಗೇನೂ ಆಗದೇ ಹುಟ್ಟೂರಿಗೆ ಮರಳಿದೆ. ಮನೆ ಸೇರುವಷ್ಟರಲ್ಲಿ ರಾತ್ರಿಯಾಗಿತ್ತು. ಮನೆಗೆ ಬಂದಾಗ ಕಿರಿಯ ಸಹೋದರ ಧನವಂತರಾವ್ ನನಗಾಗಿ ಕಾಯುತ್ತಿದ್ದ. ಆದರೆ ಅದು ಗಾಬರಿಯಿಂದ. ನಾನು ಬಂದಿರುವುದು ಯಾರಿಗೂ ಗೊತ್ತಿಲ್ಲವಲ್ಲ ಎಂದು ಕೇಳಿದ. ಯಾರೂ ನೋಡಿಲ್ಲ ಎಂದು ಉತ್ತರಿಸಿದೆ. ಗಾಂಧೀ ಹತ್ಯೆಯಾಗಿರುವುದರಿಂದ ಎಲ್ಲ ಕಡೆಗೂ ಧಾಂದಲೆ ನಡೆದಿರುವುದು. ಆದುದರಿಂದ ಕೆಲದಿನ ಯಾರಿಗೂ ಕಾಣದಂತೆ ಭೂಗತ ಖೋಲಿಯಲ್ಲಿ ಇರು ಎಂದು ಪೂರ್ವ ಯೋಜಿತ ಸಂಚಿನಿಂದ ನನ್ನನ್ನು ಬಂಧಿ ಮಾಡಿದ. ಹಲವು ಸಲ ನನ್ನನ್ನು ಕೊಲ್ಲಲು ಯತ್ನಿಸಿ ನನ್ನ ಹತ್ತಿರವೇ ಬಂದ. ಆದರೆ ನನ್ನನ್ನು ಕೊಲ್ಲುವ ಧೈರ್ಯ ಅವನಲ್ಲಿ ಇರಲಿಲ್ಲ. ನನ್ನ ಸೇವೆಗಾಗಿ ಇಬ್ಬರು ಮೂಗರನ್ನು ನೇಮಿಸಿದ. ಸುಮಾರು ಹದಿನಾಲ್ಕು ವರ್ಷ ಗತಿಸಿದ ಮೇಲೆ ಒಮ್ಮೆ ನಮ್ಮೂರಲ್ಲಿ ಭೂಕಂಪವಾದುದರಿಂದ ಎಲ್ಲರೂ ಮನೆ ಬಿಟ್ಟು ಓಡಿದರು. ಭೂಗತ ಖೋಲಿಯಲ್ಲಿ ನನ್ನನ್ನು ಇಟ್ಟಿರುವ ವಿಷಯ ಅವರಿಗೆ ಹೊಳೆಯಲೇ ಇಲ್ಲ. ಭೂಕಂಪದಿಂದ ವಾಡೆನೂ ನಡುಗಿ, ಅದಕ್ಕೆ ಧಕ್ಕೆಯಾಯಿತು. ಆಗ ಇಬ್ಬರು ಮೂಗರು ನನ್ನನ್ನು ಹೊರತಂದಾಗ ನೇರವಾಗಿ ಬಾಲ್ಯ ಸ್ನೇಹಿತ ವಿವೇಕರಾವ್ ಅವರ ಮನೆಗೆ ಹೋಗಿ





ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಸಭಿಕರೊಂದಿಗೆ

ನಡೆದ ವಿಷಯ ತಿಳಿಸಿದೆ ಮುಂತಾಗಿ ನ್ಯಾಯಾಲಯಕ್ಕೆ ಹೇಳುವನು.

ನ್ಯಾಯಾಧೀಶರು ಸತ್ಯವಂತರಾವ್ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳುವರು. ಆದರೆ ಅವನ ಹೇಳಿಕೆಯಿಂದ ವಾದಿ ಪರವಾಗಿ ತೀರ್ಪು ನೀಡುವಂತೆ ನ್ಯಾಯಾಧೀಶರಿಗೆ ಮನ ವರಿಕೆಯಾಗುವುದಿಲ್ಲ. ಏಕೆಂದರೆ ನ್ಯಾಯಾಲಯಕ್ಕೆ ಬೇಕಾಗಿರುವುದು ಸಾಕ್ಷಿ ಪುರಾವೆಗಳು, ಬರೀ ಹೇಳಿಕೆಗಳಲ್ಲ. ಹೀಗಾಗಿ ಭೌತಿಕವಾಗಿ ನ್ಯಾಯ ಪೀಠದ ಮುಂದೆ ಹಾಜರಾದರೂ ಸಾಕ್ಷಿಗಳ ಅಭಾವದಿಂದಾಗಿ 'ಸತ್ಯವಂತರಾಯರು ಕಾನೂನಿನ ಪ್ರಕಾರ, ವ್ಯವಹಾರಿಕ ಉದ್ದೇಶಗಳಿಗಾಗಿ ಸತ್ತಿದ್ದಾರೆ' ಎಂದು ಮಧ್ಯಂತರ ತೀರ್ಪನ್ನು ಕೊಡುವರು.

ವೇದಿಕೆಯ ಮೇಲೆ ಬೆಳಕು ಹರಿಯುತ್ತಿದ್ದಂತೆ ಗಂಭೀರ ವದನರಾಗಿ ಕುಳಿತ ನ್ಯಾಯಾಧೀಶರು, ಎದುರಿಗೆ ವಾದಿ ಪ್ರತಿವಾದಿ ವಕೀಲರು, ಅತ್ತಿಂದಿತ್ತ ದಸ್ತಾವೇಜುಗಳನ್ನು ಸಾಗಿಸುತ್ತಿರುವ ಜವಾನ ಮತ್ತು ಕಟಕಟೆಯಲ್ಲಿ ಪೇಲವ ಮುಖ ಮಾಡಿ ನಿಂತ ಸತ್ಯವಂತ ರಾವ್ 'ನಾ ಸತ್ತಿಲ್ಲ' ಎಂದು ಗೋಗರೆದು ಹೇಳುವ ದೃಶ್ಯ ನಮ್ಮನ್ನು ನ್ಯಾಯದಂಗಳಕ್ಕೆ ಕರೆದೊಯ್ಯುತ್ತದೆ. ದೆಹಲಿ ಕರ್ನಾಟಕ ಸಂಘದಲ್ಲಿ ದಿನಕರ(ದಿಲ್ಲಿ ನಗರ ಕನ್ನಡ ಕಲಾವಿದರ ರಂಗ) ಪ್ರಸ್ತುತ ಪಡಿಸಿದ 'ನಾ ಸತ್ತಿಲ್ಲ' ನಾಟಕದ ದ್ವಿತೀಯ ಪ್ರದರ್ಶನ ಇತ್ತೀಚೆಗೆ ನಡೆಯಿತು.

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ರಚಿಸಿದ ನಾಟಕ ದೆಹಲಿ ಕನ್ನಡಿಗರಾದ ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನದಲ್ಲಿ ಅದ್ಭುತವಾಗಿ ಮೂಡಿ ಬಂದು ಸಭಾಗೃಹದಲ್ಲಿ ನೆರೆದ ರಂಗಾಸಕ್ತರ ಮನ ತಣಿಸಿತು. ಮಹಾತ್ಮಾ ಗಾಂಧಿಯವರ ಕೊಲೆಯಾದ ಸಂದರ್ಭದ ಗಲಾಟೆಯನ್ನು ಉಪಯೋಗಿಸಿ ಸತ್ಯವಂತ ರಾವ್ ಸತ್ತಿದ್ದಾನೆ ಎಂದು ಘೋಷಿಸಿ ಅಂತಿಮ ಕಾರ್ಯಗಳನ್ನು ನೆರವೇರಿಸಿದ ಅವರ ತಮ್ಮ ಧನವಂತ ರಾವ್‌ಗೆ ಹಲವು ವರ್ಷಗಳ ನಂತರ ವಾಪಸ್ಸಾದ ಸತ್ಯವಂತ ರಾವ್ ಆಗಮನವನ್ನು ಅರಗಿಸಿಕೊಳ್ಳಲಾಗಲಿಲ್ಲ. ಕೋರ್ಟ್ ಕಟಕಟೆಯನ್ನೇರಿ ಸತ್ಯವಂತ ರಾವ್ 'ನಾ ಸತ್ತಿಲ್ಲ' ಬದುಕಿದ್ದೇನೆ ಎಂದು ಗೋಗರೆದು ಹೇಳುತ್ತಿರುವಾಗ ತಮ್ಮ ಧನವಂತರಾವ್ ನಿಜಾಂಶವನ್ನು ಮರೆಮಾಚಲು ಸಾಕ್ಷಿಗಳೊಂದಿಗೆ ಒದ್ದಾಡುವ ಕಥಾವಸ್ತು ರಂಗದ ಮೇಲೆ ಕಣ್ಣಿಗೆ ಕಟ್ಟುತ್ತಿತ್ತು. ಸತ್ಯ ಮತ್ತು ಧನ ಇವೆರಡರಲ್ಲಿ ಯಾವುದು ಗೆಲ್ಲುತ್ತೆ ಅನ್ನುವುದೇ ಕ್ಲೈಮಾಕ್ಸ್ ಅದ್ಭುತವಾದ ರಂಗ ನಿರ್ಮಾಣ, ಸುಂದರ ಬೆಳಕಿನ ಥಳುಕು, ವಸ್ತ್ರ ವಿನ್ಯಾಸ ಹಾಗೂ ಪ್ರಸಾದನಗಳನ್ನು ನಾಟಕ ತಂಡ ಅದ್ಭುತವಾಗಿ ನಿರ್ವಹಿಸಿದೆ. ವೇದಿಕೆಯಲ್ಲಿ ನಿಜ ನ್ಯಾಯಾಲಯವನ್ನು ನಿರ್ಮಿಸಿ ಅದ್ಭುತವಾಗಿ ಕಣ್ಣಿಗೆ ಕಟ್ಟುವಂತೆ ತೋರಿಸುವಲ್ಲಿ ನಿರ್ದೇಶಕ ಶಿವಾನಂದ ಇಂಗಳೇಶ್ವರ ಅವರ ಪ್ರಯತ್ನ ಶ್ಲಾಘನೀಯವಾಗಿತ್ತು.

ನಾಟಕ ಪ್ರದರ್ಶನದ ನಂತರ ಆರಂಭವಾದ ಸಂವಾದ ಕಾರ್ಯಕ್ರಮದಲ್ಲಿ ಮೊದಲಿಗೆ ಜನಪದ ವಿಧ್ವಾಂಸ ಡಾ. ಪುರುಷೋತ್ತಮ ಬಿಳಿಮಲೆಯವರು ನಾಟಕವನ್ನು ವಿಮರ್ಶಿಸುತ್ತಾ, ಸಂಪೂರ್ಣ ನಾಟಕ ವಾಸ್ತವ ಮತ್ತು ಭ್ರಮೆಯ ಸಂಘರ್ಷವನ್ನು ಕಟ್ಟಿಕೊಡುತ್ತದೆ, ಸತ್ತಿರೋ ಸತ್ಯವಂತರು ಹಾಗೂ ಬದುಕಿರೋ ಸತ್ಯವಂತರ ದ್ವಿಪಾತ್ರ ರಂಗದೆಲ್ಲೆಡೆ ಮೆರೆದಾಡುತ್ತಿದ್ದ ಅದೃಶ್ಯ ಪಾತ್ರಕ್ಕೂ ನೆಲೆ ಒದಗಿಸುವಲ್ಲಿ ನಿರ್ದೇಶಕರ ಪ್ರಯತ್ನ ಅಪೂರ್ವವಾದುದು ಎಂದರು. ಭಾರತೀಯ ಪ್ರೇಕ್ಷಕರು ಅತ್ಯಂತ ಪ್ರಭುದ್ಧರಾಗಿದ್ದು ಇಂತಹ ನಾಟಕಗಳ ಸಿರಿತನವನ್ನು ಯಾವತ್ತೂ ಆಸ್ವಾದಿಸುತ್ತಾರೆ ಎಂದರು. ರಂಗ ನಾಟಕಗಳನ್ನು ಹಲವಾರು ಆಯಾಮಗಳಲ್ಲಿ ನೋಡಿದ ಬಿಳಿಮಲೆಯವರು ಈ ಆಧುನಿಕ ನಾಟಕವನ್ನು ಪುರಾಣ, ಯಕ್ಷಗಾನ ನೆಲೆಯಲ್ಲೂ ತುಲನೆ ಮಾಡಿದರು.

ಸಂವಾದದಲ್ಲಿ ಭಾಗವಹಿಸಿದ ನಾಟಕದ ನಿರ್ದೇಶಕ ಶಿವಾನಂದ ಇಂಗಳೇಶ್ವರ ಅವರು ಮಾತನಾಡುತ್ತಾ ಸತ್ಯ ಮತ್ತು ಧನಬಲಗಳ ನಡುವಿರುವ ಹೋರಾಟವನ್ನು ನಿಜ ಜೀವನದಲ್ಲಿ ನೋಡಿದ ತನಗೆ ಅದನ್ನು ಪ್ರೇಕ್ಷಕರಿಗೆ ಮನದಟ್ಟು ಮಾಡಲು ಇದೊಂದು ಉತ್ತಮ ವೇದಿಕೆಯಾಗಿತ್ತು. ನಾಟಕದ ಕಥಾವಸ್ತು ಪ್ರಸಕ್ತ ಜನಜೀವದಲ್ಲಿ ಮಿಳಿತವಾಗಿದ್ದು ನಿರ್ದೇಶನ ಯೋಗ್ಯವಾದುದರಿಂದ ಬಹಳ ಖುಷಿಯಾಗಿದೆ ಎನ್ನುತ್ತಾ, ದೆಹಲಿಯಲ್ಲಿ ನಾಟಕ ಆಡಿಸುವುದೇ ಹರಸಾಹಸ, ಇಲ್ಲಿ ಹಲವಾರು ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಮಹಾ ನಗರಗಳಲ್ಲಿ ಹವ್ಯಾಸಿ ನಟರೆಲ್ಲ ನಾನಾ ಕೆಲಸಗಳಲ್ಲಿ ವ್ಯಸ್ತರಾಗಿರುವುದರಿಂದ ಅವರನ್ನು ಒಂದೆಡೆ ಕಲೆಹಾಕಿ 'ರಂಗ ತಾಲೀಮು' ನಡೆಸುವಷ್ಟರಲ್ಲಿ ಹೈರಾಣಾಗಿರುತ್ತೇವೆ. ಮಹಿಳಾ ನಟಿಯರ ಕೊರತೆ ಇರುವುದರಿಂದ ಮಹಿಳಾ ಪಾತ್ರವಿರದ ನಾಟಕವನ್ನೇ ರಂಗಪ್ರಯೋಗಕ್ಕೆ ಆಯ್ದುಕೊಳ್ಳಬೇಕಾಗಿದೆ. ಆದರೂ ಈ ನಾಟಕದಲ್ಲಿ ನಟಿಸಿದ ನಟರು ತಮ್ಮೆಲ್ಲ ಕೆಲಸದ ಒತ್ತಡಗಳನ್ನು ಬದಿಗಿಟ್ಟು ನಾಟಕದ ಪಾತ್ರಗಳಲ್ಲಿ ಲೀನರಾಗಿದ್ದರು ಎಂದು ನಿರ್ದೇಶಕನಿಗಿರುವ ಸವಾಲುಗಳನ್ನು ಮುಂದಿಟ್ಟು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ನಾಟಕ ರಚನಾಕಾರ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಧರ್ಮ ಮತ್ತು ಕಾಯ್ದೆಗಳನ್ನು ತಮ್ಮ ಅನುಕೂಲಕ್ಕೊಸ್ಕರ ಉಪಯೋಗಿಸಿ ಹೇಗೆ ವಿಡಂಬನೆ ಮಾಡಬಹುದೆಂದು ನಾಟಕದಲ್ಲಿ ಅಳವಡಿಸಿದ್ದೆ. ಈ ನಾಟಕ ನಾನು ಯೋಚಿಸಿದ್ದಕ್ಕಿಂತಲೂ ಅದ್ಭುತವಾಗಿ ರಂಗದ ಮೇಲೆ ಮೂಡಿಬಂದಿದ್ದು ಇದಕ್ಕಾಗಿ ನಿರ್ದೇಶಕ ಮತ್ತು ಎಲ್ಲ ನಟರಿಗೆ ನನ್ನ ಅಭಿನಂದನೆಗಳು, ಎಲ್ಲರೂ ಇದು ದುರಂತ ಅಂತ್ಯ ಕಾಣುವ ನಾಟಕ ಎಂದು ಭಾವಿಸಿದರೂ ಕೂಡ ಇದು ಆಶಾವಾದವನ್ನು ಸ್ಫುರಿಸುತ್ತದೆ, ಇದಕ್ಕೆ ನ್ಯಾಯಾಧೀಶರು ನೀಡುವ ತೀರ್ಪೇ ಸಾಕ್ಷಿ ಎಂದರು.

ಸಂವಾದದಲ್ಲಿ ಭಾಗಿಯಾದ ಸರವು ಕೃಷ್ಣ ಭಟ್, ಶ್ರೀನಾಥ್ ಅವರು ನಾಟಕವನ್ನು ಇನ್ನೂ ಉತ್ತಮ ಪಡಿಸಲು ಕೆಲ ಸಲಹೆಗಳನ್ನು ನೀಡಿದರು. ಬಿ. ವಿ. ಅಡ್ಕೋಳಿಯವರು ಸಂವಾದ ಕಾರ್ಯಕ್ರಮದಲ್ಲಿ ಬಾಗವಹಿಸಿ ಮಾತನಾಡುತ್ತಾ... ಈ ನಾಟಕ ದೆಹಲಿಯಲ್ಲಿನ ನಾಟಕ ರಂಗ, ನಿರ್ದೇಶಕ ಮತ್ತು ಕಲಾವಿದರಲ್ಲಿರುವ ಪ್ರತಿಭೆ, ಮತ್ತು ದೆಹಲಿ ಕನ್ನಡಿಗರಲ್ಲಿನ ಕಲಾಭಿರುಚಿಯುನ್ನು ಪುನರ್ಜೀವನಗೊಳಿಸುವಲ್ಲಿ 'ನಾ ಸತ್ತಿಲ್ಲ' ನಾಟಕ ಪ್ರಮುಖ ಪಾತ್ರವಹಿಸಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತಾ, ದೆಹಲಿ ಕರ್ನಾಟಕ ಸಂಘ ಪ್ರತಿಭೆಗಳಿಗೆ ಸದಾ ಪ್ರೊತ್ಸಾಹ ನೀಡುತ್ತಿದ್ದು ಹೆಚ್ಚು ಹೆಚ್ಚು ಕಾರ್ಯಕ್ರಮಗಳು ಸಂಘದ ಆವರಣದಲ್ಲಿ ನಡೆಯಬೇಕು. 'ನಾ ಸತ್ತಿಲ್ಲ' ನಾಟಕದಂತಹ ಸದಭಿರುಚಿಯ ಕಾರ್ಯಕ್ರಮಗಳು ದೆಹಲಿ ಕನ್ನಡಿಗರನ್ನು ಕಲಾ ಮಿಡಿತವನ್ನು ಬಡಿದೆಬ್ಬಿಸುವಲ್ಲಿ ಯಶಸ್ಸು ಕಂಡಿದೆ ಎಂದು ಅಧ್ಯಕ್ಷೀಯ ಭಾಷಣದಲ್ಲಿ ನುಡಿದರು.

ಪ್ರಕಾಶ್ ಶೆಟ್ಟಿ ಉಳೆಪಾಡಿ ಸಂವಾದ ಕಾರ್ಯಕ್ರಮವನ್ನು ನಿರ್ವಹಿಸಿದರೆ, ಶ್ರೀನಾಥ್ ವಂದನಾರ್ಪಣೆಗೈದರು.

**■ ಪ್ರಕಾಶ್ ಶೆಟ್ಟಿ ಉಳೆಪಾಡಿ**

ಅಲ್ಲದೆ ಉಭಯ ಪಕ್ಷಗಳು ತಮ್ಮ ವಾದವನ್ನು ಅವಶ್ಯ ದಾಖಲೆಗಳೊಂದಿಗೆ ನ್ಯಾಯಾಲಯದಲ್ಲಿ ಮಂಡಿಸಬಹುದು ಎಂದು ಹೇಳಿದರು.

'ನಾ ಸತ್ತಿಲ್ಲ' ಎಂಬ ನಾಟಕದ ಮೂಲವಸ್ತು ಎಂದರೆ ಧನಬಲ, ತೋಳ್ಬಲ ಇರುವ ಕುತಂತ್ರವಾದಿಗಳು ಸತ್ಯ ಮತ್ತು ಆಹಿಂಸಾ ತತ್ವಾದರ್ಶಗಳನ್ನು ಮೂಲೆ ಗುಂಪುಮಾಡಲು ಯತ್ನಿಸುವವರು ಎಂಬುದು. ನ್ಯಾಯಾಂಗ ವ್ಯವಸ್ಥೆಯಲ್ಲಿರುವ ಕೆಲ ನ್ಯೂನ್ಯತೆಗಳನ್ನು ತಮಗನುಕೂಲವಾಗುವಂತೆ ಬಳಸಿಕೊಂಡು ಒಬ್ಬ ದೇಶಭಕ್ತಿ ಜೀವಂತವಾಗಿರುವಾಗಲೇ ಸತ್ತಿದ್ದಾನೆಂದು ಸಾಧಿಸುವಲ್ಲಿ ಒಡಹುಟ್ಟಿದವರು ಹಾಗು ಸಮಾಜದಲ್ಲಿರುವ ಬಲಾಢ್ಯರು ನೀಚ ತಂತ್ರ ಹಂತ ಹಂತವಾಗಿ ಬಿಚ್ಚಿಕೊಳ್ಳುತ್ತದೆ. ಹಣದ ಆಮಿಷಕ್ಕಾಗಿ ಸಾತ್ವಿಕ ವ್ಯಕ್ತಿಯ ಅಸ್ತಿತ್ವವನ್ನೇ ಅಲ್ಲಗಳೆಯುವ ಪ್ರಚಂಡಾಚಾರರಂತಹ ಶಾಸ್ತ್ರಿಗಳು ಮತ್ತು ಸಂಪತ್ತಿನ ಆಸೆಗಾಗಿ ಕುತಂತ್ರ ಮಾಡುವ ಧನವಂತರಾವ್‌ರಂತಹ ಸಾಕಷ್ಟು ಜನ ನಮ್ಮ ಸಮಾಜದಲ್ಲಿ ದೊರೆಯುವರು. ಆದರೂ ಸತ್ಯ ಸತ್ತಿಲ್ಲ ಎಂಬುದನ್ನು ಮರೆಯುವಂತಿಲ್ಲ.

ಈ ಸುಂದರವಾದ ನಾಟಕವನ್ನು ಪ್ರಸ್ತುತಪಡಿಸಿದವರು 'ದಿಲ್ಲಿ ನಗರ (ಕನ್ನಡ) ಕಲಾವಿದರ ರಂಗ'. ನಾ ಸತ್ತಿಲ್ಲ ನಾಟಕದ ಪಾತ್ರಧಾರಿಗಳು : ನ್ಯಾಯಾಧೀಶರಾಗಿ ಶ್ರೀ ಟಿ.ಎಸ್.ರಮೇಶ, ವಾದಿ ಸತ್ಯವಂತರಾವ್ ದೇಶಮುಖ್‌ರಾಗಿ ಶ್ರೀ ಶಿವಾನಂದ ಇಂಗಳೇಶ್ವರ, ಪ್ರತಿವಾದಿ ಧನವಂತರಾವ್ ದೇಶಮುಖ್‌ರಾಗಿ ಶ್ರೀ ಎಸ್.ಎಚ್. ಅಮರೇಶ, ವಾದಿ ವಕೀಲ ವಿವೇಕರಾವ್‌ರಾಗಿ ಶ್ರೀ ಡಿ.ವಿ. ಶ್ರೀನಿವಾಸ ಮೂರ್ತಿ, ಪ್ರತಿವಾದಿ ವಕೀಲ ಭಂಡೇರಾವ್‌ರಾಗಿ ಶ್ರೀ ಎಚ್.ಕೆ. ರವಿಕುಮಾರ್, ವಾದಿ ಸಾಕ್ಷಿ ಬೀರಪ್ಪ ಬೀರಲದಿನ್ನಿ ರೂಪದಲ್ಲಿ ಶ್ರೀ ಎಸ್.ಕುಮಾರ್, ಪ್ರತಿವಾದಿ ಸಾಕ್ಷಿ ಹೇಳಲು ಪ್ರಚಂಡಾಚಾರರಾಗಿ ಶ್ರೀ ಸಂತೋಷ ಕುಮಾರ್ ಉಪಾಧ್ಯಾಯ ಅವರು ಅಭಿನಯಿಸಿದರು. ನ್ಯಾಯಾಲಯದ ಬೆಂಚ್‌ಕ್ಲರ್ಕ್‌ನ ಪಾತ್ರಧಾರಿಯಾಗಿ ಶ್ರೀ ಗಣೇಶ ಪ್ರಸಾದ ಹಾಗೂ ಜವಾನನಾಗಿ ಶ್ರೀ ಎಸ್.ಎಸ್. ಗೋವಿಂದರಾಜ್ ಅವರು ಅಭಿನಯಿಸಿದರು.

ಒಂದು ನಾಟಕ ಯಶಸ್ವಿಯಾಗಲು ನಾಟಕದ ಪಾತ್ರಧಾರಿಗಳಾಗಿ ರಂಗಮಂಚದಲ್ಲಿ ಅಭಿನಯಿಸುವವರು ಎಷ್ಟು ಮುಖ್ಯವಾಗುವುದೋ ಹಾಗೆಯೇ ನಾಟಕದ ಯಶಸ್ಸು ಪರದೆಯ ಹಿಂದಿರುವ ವ್ಯಕ್ತಿಗಳ ಕಲಾ ಕೌಶಲ್ಯವೂ ಅಷ್ಟೇ ಮುಖ್ಯವಾಗಿರುವುದು. ನಾ ಸತ್ತಿಲ್ಲ ನಾಟಕದ ವಿನ್ಯಾಸ, ನಿರ್ದೇಶನ ಹಾಗೂ ನಾಟಕದಲ್ಲಿ ಸತ್ಯವಂತರಾವ್ ಅವರ ಪ್ರಾತ್ರವನ್ನು ನಿರ್ವಹಿಸಿದರು ಶ್ರೀ ಶಿವಾನಂದ ಇಂಗಳೇಶ್ವರ ಅವರು. ವಸ್ತ್ರವಿನ್ಯಾಸ, ರಂಗಸಜ್ಜಿಕೆ ಹಾಗೂ ಪ್ರಸಾಧನವನ್ನು ಶ್ರೀ ಚೆನ್ನು ಎಸ್. ಮಠದ ಅವರು ಮಾಡಿದರು. ನಾಟಕದ ಬೆಳಕು ನಿರ್ವಹಣೆಯನ್ನು ವಿಜಾಪುರದ ಶ್ರೀ ಯೋಗೇಂದ್ರ ಸಿಂಗ್ ಮಾಡಿರುವರು. ಯೋಗೇಂದ್ರ ಸಿಂಗ್ ಅವರು ಬಿಜಾಪರದಲ್ಲಿ ಅಟೋ ಚಾಲಕ ವೃತ್ತಿ ಮಾಡಿ ಜೀವನ ಸಾಗಿಸುತ್ತಿರುವವರು. ಯಾವುದೇ ನಾಟಕದ ಬೆಳಕು ನಿರ್ವಹಣೆ ಕಾರ್ಯ ಬಂದರೂ ಅವರು ತಮ್ಮ ಬಡತವನ್ನು ಲೆಕ್ಕಿಸದೆ ನಾಟಕಕಾರರಲ್ಲಿ ತೊಡಗುವವರು ಎಂದು ತಿಳಿದು ಕೆಲವರಿಗಾದರೂ ಕೇಡೆನಿಸಿತು. ನಾಟಕಕಾರರಲ್ಲಿ ನಿರತರಾದವರ ಆರ್ಥಿಕ ಸ್ಥಿತಿ ಬಹಳ ಗಂಭೀರವಾಗಿದೆ. ಆದರೆ ಅವರ ಸ್ಫೂರ್ತಿ ಮಾತ್ರ ಕುಗ್ಗಿಲ್ಲ. ನಾಟಕಕ್ಕೆ ಸಂಗೀತ ನೀಡಿದವರು ಶ್ರೀ ಟಿ.ಎಸ್.ರಮೇಶ, ಶ್ರೀ ಅಶೋಕ ಕುಂಬಾರ, ಶ್ರೀ ಶ್ರೀಹರ್ಷ, ಶ್ರೀ ಎಸ್.ಎಸ್.ಗೋವಿಂದರಾಜು, ಹಾಗೂ ಸಂತೋಷ್ ಕುಮಾರ್ ಉಪಾಧ್ಯಾಯ. ಸತ್ಯವಂತರಾವ್ ಅವರು ತಮ್ಮ 14 ವರ್ಷಗಳ ಅನುಭವವನ್ನು ನ್ಯಾಯಾಲಯದ ಮುಂದೆ ಹೇಳುವ ರೇಖಾಚಿತ್ರದ ಪರಿಕಲ್ಪನೆ ಮಾಡಿದವರು ಶ್ರೀ ಸುಧೀರ್ ಫಡ್ನೀಸ್ ಅವರು. ನಾಟಕದ ಸಂಯೋಜಕರಾಗಿ ಶ್ರೀ ಸಂತೋಷ್ ಕುಮಾರ್ ಉಪಾಧ್ಯಾಯ ಹಾಗೂ ಪ್ರಚಾರ ಸಾಮಗ್ರಿ ವಿನ್ಯಾಸಕರಾಗಿ ಶ್ರೀ ವೀರೇಶ್ ಹೊಗೆಸೊಪ್ಪಿನವರು ತಮ್ಮ ಕಾರ್ಯವನ್ನು ನಿರ್ವಹಿಸಿ ನಾಟಕವನ್ನು ಯಶಸ್ವಿಗೊಳಿಸಿದರು. ಸಮಸ್ತ ಕನ್ನಡಿಗರ ಪರವಾಗಿ 'ನಾ ಸತ್ತಿಲ್ಲ' ನಾಟಕದ ಎಲ್ಲ ಕಲಾವಿದರಿಗೂ, ನಿರ್ದೇಶಕರಿಗೂ ಹಾಗೂ ರಂಗದ ಹಿಂದೆ ಕಾರ್ಯ ನಿರ್ವಹಿಸಿದ ಸದಸ್ಯರುಗಳಿಗೆ ಅಭಿನಂದನೆಗಳು.



■ **ಡಾ.ಜಿ.ಎ.ಬಿರಾದಾರ**

ಹಾಸ್ಯ-ಲೇಖನ

# "ನಮ್ಮ ಮನೆಯಲ್ಲಿ ನಾನೊಬ್ಬ ಅಲ್ಪಸಂಖ್ಯಾತಕ"

ಹಾದು ಹೆಣ್ಣು ಮಕ್ಕಳಿಗೆ / ಮಹಿಳೆಯರಿಗೆ 33% ಮೀಸಲಾತಿಯ ಗಲಾಟೆ ಪಾರ್ಲಿಮೆಂಟ್‌ನಲ್ಲಿ ಭುಗಿಲೆದ್ದಾಗ ನನಗೆ ನನ್ನ ನಿಜ ಸ್ಥಿತಿಯ ಜ್ಞಾನೋದಯವಾಯಿತು. ನಮ್ಮ ಮನೆಯಲ್ಲಿ ವಸ್ತುಸ್ಥಿತಿ 75 : 25, ಅಂದರೆ ನಾನು ಒಬ್ಬ, ನನಗೆ ಒಬ್ಬಾಕೆ ಮತ್ತು ಇಬ್ಬರು ಹೆಣ್ಣು ಮಕ್ಕಳು. ಕಾಕತಾಳೀಯವೋ ಏನೋ ಇದೂ ಸಾಲದೆಂಬಂತೆ ಮೊನ್ನೆ ಮೊನ್ನೆ ಎಲ್ಲಿಂದಲೋ ಬಂದು ಮನೆ ಸೇರಿದ ಬೆಕ್ಕಿನ ಮರಿ ಕೂಡಾ ಹೆಣ್ಣು. ಹೀಗೆ ನಮ್ಮ ಮನೆಯಲ್ಲಿ ನಾನೊಬ್ಬ ಅಪ್ಪಟ 'ಮೈನಾರಿಟಿ". ಇನ್ನು ನನ್ನಾಕೆಯ ಪರಮಾಪ್ತಳಾದ ಉಮಾದೇವಿ, ಹ್ಞಾಂ ಅವಳೇ, ಅವಳೇ, ನಮ್ಮ ಅಡಿಗೆ ಮನೆ ರಿಪೇರಿಗಾಗಿ ಒಬ್ಬ 'ಒಳ್ಳೆಯ' ಕಾಂಟ್ರಾಕ್ಟರನ್ನು ಒದಗಿಸಿಕೊಟ್ಟ ಪುಣ್ಯಾತಗಿತ್ತಿ; ಆ ಉಮಾಳಿಗೂ ಇಬ್ಬರೂ ಹೆಣ್ಣು ಮಕ್ಕಳು. ಅವಳ ಪತಿ ನನ್ನಂತೆ ಅಲ್ಪ ಸಂಖ್ಯಾತ. ಆದರೆ ಒಂದು ಒಳ್ಳೆಯ ವಿಚಾರ ಅಂದರೆ ಅವನೊಬ್ಬ ಪತ್ರಕರ್ತ. ಹಾಗಾಗಿ ಆ ಮಹಾಶಯ ಪ್ರತಿನಿತ್ಯ ಮಧ್ಯಾಹ್ನ 12.30-1.00ಗಂಟೆಗೆ ತನ್ನ ಪತ್ರಿಕಾಲಯಕ್ಕೆ ಹೋದರೆ ಮರಳಿ ಬರುವುದು ಮಧ್ಯ ರಾತ್ರಿ 12.30-1.00ಗಂಟೆಯ ವೇಳೆಗೆ. ಅವನಿಗೆ ಅಲ್ಪ ಸಂಖ್ಯಾತನಾಗಿ ಸಹಿಸಬೇಕಾದ ವೇಳೆ (ಮನೆಯಲ್ಲಿ) ಬಹಳ ಕಡಿಮೆ. ನನ್ನ ಗತಿ ಹಾಗಲ್ಲ. ನನ್ನ ಮೂವರು ಮಹಿಳೆಯರೂ, ಇನ್ನೂ ನನ್ನಾಕೆಯ ಸ್ನೇಹಿತೆ ಮತ್ತು ಅವಳ ಇಬ್ಬರು ಹೆಣ್ಣು ಮಕ್ಕಳು ಎಲ್ಲಾ ಸೇರಿ ಒಮ್ಮೊಮ್ಮೆ ನಮ್ಮ ಮನೆಯಲ್ಲಿ ಸ್ಲೀಪ್ ಓವರ್ ಮಾಡಿದರೆಂದರೆ ನಾನು ಆ ರಾತ್ರಿ ಸ್ಲೀಪ್ ಔಟ್. ಅಂದರೆ ಇರುವ 2 ಸಣ್ಣ ಸಣ್ಣ ಕೋಣೆಯಲ್ಲಿ ಒಂದರಲ್ಲಿ 4 ಹೆಣ್ಣು ಮಕ್ಕಳು ಮಲಗಿದರೆ, ಇನ್ನೊಂದರಲ್ಲಿ ನನ್ನಾಕೆ ಮತ್ತು ಆಕೆಯ ಆಪ್ತ ಸ್ನೇಹಿತೆ, ಇನ್ನು ನನಗೆ ಉಳಿಯುವುದು 6x3ರ ಸಣ್ಣ ಬಾಲ್ಕನಿ. ರಾತ್ರಿಯೆಲ್ಲಾ ಫ್ರೆಶ್ ಏರ್ (ಪ್ರೆಶರ್)ನಲ್ಲಿ ಪವಡಿಸುವುದೊಂದೇ ನನ್ನ ಪಾಲಿನ ಭಾಗ್ಯ. ಕಥೆ ಇಷ್ಟಕ್ಕೇ ಮುಗಿದಿಲ್ಲ. ನನ್ನ ಹೆಂಡತಿಗೆ 4 ಜನ ತಂಗಿಯರು. ಅವರೆಲ್ಲರಿಗೂ 1-2 ಹೆಣ್ಣು ಮಕ್ಕಳು. ಈ ನಾಲ್ಕು ಮೋಸಿ (ಚಿಕ್ಕಮ್ಮ)ರ ಪೈಕಿ ಯಾರು ನಮ್ಮ ಮನೆಗೆ ಬಂದು ರಾತ್ರಿ ಉಳಿದರೆ ನನ್ನ ಗತಿ ಮೋಸವೇ. ಮತ್ತೆ ಅದೇ ಬಾಲ್ಕನಿ. ಹೋಗಲಿ, ಈ ಆಪ್ತ ಸ್ನೇಹಿತೆ, ಮೋಸಿಯರು ಹಾಗಿರಲಿ ನೆರೆಮನೆಯಲ್ಲಾದರೂ ಸ್ವಲ್ಪ ಉಸಿರು ಬಿಡೋಣವೇ ಅಂದರೆ, ನೀವು ನಂಬಿದರೆ ನಂಬಿ ಬಿಟ್ಟರೆ ಬಿಡಿ, ಅಲ್ಲಿಯೂ ಅಪ್ಪ-ಅಮ್ಮ ಮತ್ತು 2 ಹೆಣ್ಣು ಮಕ್ಕಳು. ಇತ್ತೀಚೆಗಷ್ಟೇ ಅವರೊಂದು ಗಂಡು ಮಗುವನ್ನು ದತ್ತು ತೆಗೆದುಕೊಂಡು ಬಂದಿದ್ದಾರೆ. ಅವನೊಬ್ಬ ನನ್ನ ಭವಿಷ್ಯದಲ್ಲಿ ಸ್ಥಿತಿ ಸುಧಾರಕನಾದನೋ ಎಂಬ ಆಶೆ ಅಷ್ಟೆ. ಆದರೆ ನನ್ನ 2 ಹೆಣ್ಣು ಮಕ್ಕಳನ್ನು ದೀದಿ ದೀದಿ ಎಂದು ಕರೆಯುವ ಆ ಪುಟಾಣಿ, ನನ್ನಾಕೆಯನ್ನು 'ಮಮ ಆಂಟಿ' ಎಂದೂ ನನ್ನನ್ನು 'ಮದು ಅಂಕಲ್' ಎಂದು ಕರೆಯುತ್ತಾನೆ. ಈ ಎಲ್ಲಾ ಅಲ್ಪ ಸಂಖ್ಯಾತಕತನದ ಮಧ್ಯೆ ಕೆಲವೊಮ್ಮೆ-ಅಂದುಕೊಳ್ಳುವುದುಂಟು. ಈ ಎಲ್ಲಾ ಗಂಡುಗಳ ಮಧ್ಯೆ ನಾನೊಬ್ಬನೇ ಹೆಣ್ಣು ಹೆಂಗಸೋ ಏನೋ ಎಂದು. ಇವರೆಲ್ಲಾ ಸ್ಲೀಪ್ ಓವರ್ ಮಾಡಿ ಮಲಗಿದ ಮರುದಿನ ಮುಂಜಾನೆಯ ನನ್ನ ಕತೆಯನ್ನು ನಿಮ್ಮೊಡನೆ ಹೇಳಲೇಬೇಕು. ಅದೊಂದು ಚಿಂತಾಜನಕ ಸ್ಥಿತಿ. ಇರುವ ಒಂದು ಬಾತ್‌ರೂಂ ಮತ್ತು ಪಾಯಿಖಾನೆಯನ್ನು 6-7 ಮಂದಿ ಮಹಿಳೆ / ಹೆಣ್ಣು ಮಕ್ಕಳ ಪೈಪೋಟಿಯ ನಡುವೆ ನಾನು ಉಸಿರು ಕಟ್ಟಿಕೊಂಡು, ಹೇ ದೇವರೇ ನನ್ನ ನಂಬರ್ ಯಾವಾಗ ಬರುತ್ತದಪ್ಪಾ ಎಂದು ಕಾಯುತ್ತಾ ಕೂರುವುದು. ಒಮ್ಮೊಮ್ಮೆ ಅಂತಹ ಪರಿಸ್ಥಿತಿಯಲ್ಲಿ ನನಗನ್ನಿಸುವುದುಂಟು. ಇನ್ನೊಂದು ಎಕ್ಸ್‌ಟ್ರಾ ಕೋಣೆ ಹಾಗೂ ಪಾಯಿಖಾನೆ ಇರುವ ದೊಡ್ಡ ಮನೆಯನ್ನು ಸ್ವಲ್ಪ ಹೆಚ್ಚು ಸಾಲ ಮಾಡಿಯಾದರೂ ಕೊಂಡು ಕೊಳ್ಳಬಾರದಿತ್ತೇ ಮೂರ್ಖ ಎಂದು. ಹಾಗೇ ಕೆಲವೊಮ್ಮೆ ಒತ್ತಡ ತಡೆಯಲಾಗದೆ ಒಂದು ಬಾಟ್ಲಿಯೋ / ಲೋಟವನ್ನೋ ಹಿಡಿದುಕೊಂಡು ಪಕ್ಕದ ಮೆಟ್ರೋ ಲೈನ್ ಅಥವಾ ಗಂದ ನಾಲಾದ ಬಳಿ ಹೋಗಿ ನನ್ನ ಸಾವಿರಾರು ಬಂಧುಗಳ ಜೊತೆ ಕುಳಿತು ನೆಮ್ಮದಿಯಾಗಿ ಉಸಿರು ಬಿಡಬೇಕು ಅನ್ನಿಸಿದ್ದೂ ಉಂಟು. ಒಟ್ಟಿನಲ್ಲಿ ಅಲ್ಪಸಂಖ್ಯಾತನಾಗಿ ಬದುಕುವುದು, ಅದರಲ್ಲೂ ನನ್ನ ಮನೆಯೊಳಗೆ, ಆ ಸ್ಥಿತಿಯಲ್ಲಿ ಜೀವನ ನಡೆಸುವುದು ಒಂದು ಅದ್ಭುತ ಅನುಭವ. "ಮಹಿಳಾ ಸ್ವಾತಂತ್ರ್ಯ", ಮಹಿಳೆಯರು ಹಕ್ಕು ಎಂದೆಲ್ಲಾ, ಶಾಲಾ ಕಾಲೇಜು ದಿನಗಳಲ್ಲಿ ಭಾಷಣ ಬಿಗಿದು ಪಡೆದ ಕೆಲವು ಶೀಲ್ಡು, ಸರ್ಟಿಫಿಕೇಟುಗಳು ಶೋಕೇಸ್‌ನಲ್ಲಿ ಕುಳಿತು, ನನ್ನನ್ನು ನೋಡಿ ಆಗಾಗ್ಗೆ ನಗುತ್ತವೆ. ಅದಕ್ಕೆ ತಾನೇ ನಮ್ಮ ಪಾರ್ಲಿಮೆಂಟಿನಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತರದಂತೆ ಹೋರಾಟ ನಡೆಸಿರುವುದು. ಏಕೆಂದರೆ ನಮ್ಮ 'ಗಂಡು' ನಾಯಕರು ಮೈನಾರಿಟಿನಾಳಲು ಸಿದ್ಧರಿಲ್ಲ. ಹಾಗೇನಾದರೂ ಆದರೆ ಸ್ತ್ರೀಭ್ರೂಣ ಹತ್ಯೆ, ಸಗೋತ್ರ ಮದುವೆ, ವರದಕ್ಷಿಣೆ ನೆಪದಲ್ಲಿ ಮಹಿಳೆಯರನ್ನು / ಹೆಣ್ಣು ಮಕ್ಕಳನ್ನು ಅಷ್ಟು ಸುಲಭವಾಗಿ ಕೊಲ್ಲುವುದು ಸಾಧ್ಯವಾಗದು ತಾನೆ.

■ **ಸಖಾರಾಮ ಉಪ್ಪೂರು**



ದೆಹಲಿ ಕನ್ನಡಿಗರಿಗೆ
ಶ್ರೀಕೃಷ್ಣ ಜನ್ಮಾಷ್ಟಮಿ, ಗಣೇಶ ಹಬ್ಬದ
ಶುಭಾಶಯಗಳು

# ಕರ್ನಾಟಕ ಫುಡ್ ಸೆಂಟರ್

ರಾವ್ ತುಲಾರಾಮ್ ಮಾರ್ಗ, ಸೆಕ್ಟರ್-12, ಆರ್.ಕೆ.ಪುರಂ, ನವದೆಹಲಿ-110022
ಫೋನ್ : 011-26187357 / 32961674

ಕನ್ನಡಿಗರ ಶುಚಿರುಚಿಯಾದ ತಿಂಡಿ ತಿನಿಸುಗಳಿಗೆ
ಭೇಟಿ ನೀಡಿರಿ

ಕನ್ನಡಿಗರ ಸೇವೆ ನಮ್ಮ ಆಸೆ

# R.V. Printing Press

A HOUSE OF QUALITY PRINTING

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : rvprintingpress@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

ಆರ್.ವಿ. ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

ಮುಖಪುಟ ಲೇಖನ

## ಕೃಷ್ಣಾ ಎನಬಾರದೆ, ಶ್ರೀ ಕೃಷ್ಣಾ ಎನಬಾರದೆ ಕೃಷ್ಣನ ನೆನೆದರೆ, ಕಷ್ಟವೊಂದಿಷ್ಟಿಲ್ಲ

# ದೆಹಲಿಯಲ್ಲಿ ಕನ್ನಡಿಗರ ಕೃಷ್ಣ ಮಂದಿರ




ಕೃಷ್ಣಾ ಎನಬಾರದೆ, ಶ್ರೀ ಕೃಷ್ಣಾ ಎನಬಾರದೆ, ಕೃಷ್ಣನ ನೆನೆದರೆ, ಕಷ್ಟವೊಂದಿಷ್ಟಿಲ್ಲ.
ದೆಹಲಿಯಲ್ಲಿ ಕನ್ನಡಿಗರ ಕೃಷ್ಣ ಮಂದಿರ, ದೆಹಲಿಯ ಪ್ರತಿಷ್ಠಿತ ಪ್ರದೇಶಗಳಲ್ಲೊಂದಾದ ಸಫ್ದರ್‌ಜಂಗ್ ಎನ್‌ಕ್ಲೇವ್‌ನಲ್ಲಿ ಕನ್ನಡಿಗರಿದ್ದೇ ಆದ ಶ್ರೀ ಕೃಷ್ಣಮಂದಿರವೊಂದಿದೆ. 1951ರಲ್ಲಿ ಕೃಷ್ಣಮಠದ ಸ್ಥಾಪನೆ. ಹಳೆದೆಹಲಿಯಲ್ಲಿ ಕನ್ನಡಿಗರ ಸಂಘವನ್ನು ಶ್ರೀ ಆನಂದ ಕೀರ್ತಿರಾವ್, ಶ್ರೀ ರಘುನಾಥ್ ರಾವ್, ಶ್ರೀ ಚಿಪ್ಪನ್‌ಕಟ್ಟಿ ಹೀಗೆ ಮೊದಲು ಪ್ರಾರಂಭಿಸಿ, ಅದನ್ನು ಪ್ರಗತಿಗೊಳಿಸುತ್ತಾ, ಬಂದು 1980ರ ಮೇ 7ರಂದು ಶ್ರೀ ಎಸ್.ಆರ್. ರಾವ್ ಅವರು "ಬೆಂಗಳೂರಿ"ನಿಂದ ಕೃಷ್ಣ ಶಿಲೆಯಲ್ಲಿ ಕಟೆದ ಸುಂದರ ವಿಗ್ರಹವನ್ನು ಶಿಲ್ಪಿಗಳಿಂದ ತರಿಸಿಕೊಂಡು (ಸಾಧಾರಣ 2 ಅಡಿ ಎತ್ತರ 6 ಇಂಚು ಅಗಲದ) ಶ್ರೀ ವಿ.ಆರ್. ಪಂಚಮುಖಿಯವರ ನೇತೃತ್ವದಲ್ಲಿ ಸಫ್ದರ್‌ಜಂಗ್ ಎನ್‌ಕ್ಲೇವ್, ಎ-2/117, ಹೊಸದೆಹಲಿ-29ರಲ್ಲಿ ಹೊಸ ಮಠ(ಕಟ್ಟಡ)ದಲ್ಲಿ ಪ್ರತಿಷ್ಠಾಪನೆಗೊಳಿಸಿದರೆಂದು ಹೇಳುವರು. ಬೆಂಗಳೂರಿನಿಂದ 30 ಕಿ.ಮೀ. ದೂರದಲ್ಲಿರುವ ಶಿವರ ಪಟ್ಟಣದಲ್ಲಿ ನೆಲೆಸಿರುವ ಶ್ರೀ ಶಂಕರಾಚಾರ್ಯರು ಕೃಷ್ಣ ಪರಮಾತ್ಮನ ಮೂರ್ತಿ ಕೆತ್ತಿದ್ದಾರೆ. ಶ್ರೀ ಎಸ್.ಆರ್. ರಾವ್ ಅವರು ಆರ್ಕಿಯಾಲೋಜಿ ವಿಭಾಗದಲ್ಲಿ ಸುಪರಿಂಟೆಂಡೆಂಟ್ ಇಂಜಿನಿಯಾರಾಗಿದ್ದಾಗ 1976-80ರವರೆಗೆ ತಮ್ಮ ಮನೆಯಲ್ಲಿಟ್ಟು ಪೂಜೆ ಮಾಡುತ್ತಿದ್ದರಂತೆ. ನಂತರ ಅವರು ತಮ್ಮ ಮೇಲ್ವಿಚಾರಣೆಯಲ್ಲಿ ದಿಲ್ಲಿಯಲ್ಲಿ 1980ಕ್ಕೆ ಕಾಣಿಕೆ ನೀಡಿದರೆಂದು ಹೇಳುತ್ತಾರೆ. ಮಠದ ಬಲಭಾಗದಲ್ಲಿ ಆಂಜನೇಯ ಮೂರ್ತಿ, ಎಡಭಾಗದಲ್ಲಿ ರಾಘವೇಂದ್ರ ರಾಯರ ಬೃಂದಾವನ, ಮಠದ ಎದುರಿಗೆ ಶಿವಕುಟುಂಬ ಹಾಗೂ ಪ್ರತ್ಯೇಕವಾಗಿ ಒಂದು ದುರ್ಗಾದೇವಿಯ ಸಂಗಮವರಿ ಶಿಲೆಯಲ್ಲಿ ಕಟೆದ ಮೂರ್ತಿಗಳ ಚಿಕ್ಕ ಮಂದಿರ, ಎಡಬದಿಯಲ್ಲಿ ನವಗ್ರಹ ಚಿಕ್ಕಮಂದಿರ ಹಾಗೂ ಹೋಮ, ಹವನ, ಭೋಜನ ಸಿದ್ಧತೆ, ಉಳಿದುಕೊಳ್ಳುವ ವ್ಯವಸ್ಥೆಗಾಗಿ ಒಂದು ಕಟ್ಟಡ ಹೀಗೆ ವ್ಯವಸ್ಥಿತ ಪ್ರದೇಶವಾಗಿದೆ. "ಕೃಷ್ಣಾಯ, ವಾಸುದೇವಾಯ ಹರಯೆ ಪರಮಾತ್ಮನೆ ಪ್ರಣತ ಕ್ಲೇಶನಾಶನಾಯ ಗೋವಿಂದಾಯ





ನಮೋ ನಮಃ ॥"
ಎಂಬ ಫಲಕ ಹಾಕಿದ್ದಾರೆ. ಕೃಷ್ಣನಿಗೆ ಅನೇಕ ಹೆಸರುಗಳಿಂದ ಸಂಭೋದಿಸುತ್ತಾರೆ. ಕೃಷ್ಣ ವಾಸುದೇವ, ಹರ, ಪರಮಾತ್ಮ, ಗೋವಿಂದ ಹೀಗೆ ಮನಸ್ಸಿನ ಹಾಗೂ ಶಾರೀರಿಕ ತೊಂದರೆ, ದುಃಖ, ನೋವು, ಕಷ್ಟಗಳನ್ನು ನಿವಾರಣೆ ಮಾಡು ನಿನಗೆ ಅನಂತ ನಮನಗಳು ಎಂಬ ಅರ್ಥ ಬರುತ್ತದೆ.
ಈಗಿನ ಅಧ್ಯಕ್ಷರಾದ, ಶ್ರೀ ಎಂ.ವಿ. ರಾವ್, ಕಾರ್ಯದರ್ಶಿಯವರಾದ ಶ್ರೀ ನಾರಾಯಣ ಕುಲಕರ್ಣಿ, ಕೋಶಾಧ್ಯಕ್ಷರಾದ ಶ್ರೀ ಕೆ.ಎಸ್. ರಂಗನ್ ಹಾಗು ಶ್ರೀ ಹನುಮಂತಾಚಾರ್ಯರು, ಶ್ರೀ ಸುಧೀರ್ ಫಡ್ನೀಸ್, ಶ್ರೀ ಪ್ರಾಣೇಶ್ ಹೀಗೆ ಅನೇಕಾನೇಕರು ಶ್ರಮವಹಿಸಿ ಕನ್ನಡಿಗರ ಸಂಘಟನಾ, ಕಲ್ಯಾಣ ಕಾರ್ಯಗಳನ್ನು ಮಾಡುತ್ತಿದ್ದಾರೆ.



■ ಡಾ. ಸುಮಂಗಲಾದೇವಿ

# ಓಂ-ಧ್ವನಿ ಮುದ್ರಿಕೆ-ಹಿಂದಿ ಭಾಷೆಯಲ್ಲಿ ಬಿಡುಗಡೆ



ಚಿತ್ರದಲ್ಲಿ : ಎಡದಿಂದ ಬಲಕ್ಕೆ : ಶ್ರೀ ಪೃಥ್ವಿನಾಥ್ ಕಾಚ್ರೂ, ನ್ಯಾ. ಧಿರೇನ್ ಕಾರಿಯಾ, ಡಾ. ಎಂ. ವೀರಪ್ಪ ಮೊಯಿಲಿ, ಶ್ರೀ ಸಿ.ವಿ. ಗೋಪಿನಾಥ್, ಡಾ. ಅಶೋಕ್ ಪ್ರಧಾನ್

ವೇದ-ಉಪನಿಷತ್‌ಗಳು ಹಾಗೂ ಪ್ರಾಚ್ಯ ಸಂಸ್ಕೃತಿಯ ಧರ್ಮ ಗ್ರಂಥಗಳ ಆಧಾರದ ಮೇಲೆ, ಜಗತ್ತಿನ ಸೃಷ್ಟಿಯ ಮೊದಲ ಶಬ್ಧವಾದ "ಓಂ"ನ ಒಂದು ಅಧ್ಯಯನದ ಧ್ವನಿಮುದ್ರಿಕೆಯನ್ನು, ಸಂಘದ ಅಧ್ಯಕ್ಷರೂ ಹಾಗೂ ವೇದಗಳನ್ನು ಕಲಿಸುವ ಗುರುವಾದ ಶ್ರೀ ಸಿ.ವಿ. ಗೋಪಿನಾಥ್ ಅವರು ಈಗಾಗಲೇ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಯಲ್ಲಿ ಪರಿಕಲ್ಪಿಸಿ ಪ್ರಸ್ತುತಿ ಮಾಡಿದ್ದಾರಷ್ಟೆ. ಈ ಧ್ವನಿಮುದ್ರಿಕೆಯ ಹಿಂದಿಯ ಅವತರಿಣಿಕೆಯನ್ನು-"ಓಂ-ಬ್ರಹ್ಮಾಂಡ ಕೆ ಸೃಷ್ಟಿ ನಿನಾದ್ ಕಾ ಸಾಕ್ಷಾತ್ಕಾರ್" ಹೆಸರಿಸಿ ದಿನಾಂಕ 24.08.2010ರಂದು ಬಿಡುಗಡೆ ಮಾಡಿ ಲೋಕಾರ್ಪಣೆ ಮಾಡಲಾಯಿತು. ಭಾರತೀಯ ವಿದ್ಯಾ ಭವನದ ವಿದ್ಯಾರ್ಥಿಯಾದ ಶ್ರೀ ಸಿ.ವಿ. ಗೋಪಿನಾಥ್ ಅವರನ್ನು ಗೌರವಿಸಿ, ಭವನ ದೆಹಲಿಯಲ್ಲಿ ಬಿಡುಗಡೆಯ ಸಮಾರಂಭವನ್ನು ಏರ್ಪಡಿಸಿತ್ತು. ಈ ಧ್ವನಿಮುದ್ರಿಕೆಯ ಬಿಡುಗಡೆ ಕೇಂದ್ರದ ನ್ಯಾಯ ಹಾಗೂ ಕಾನೂನು ವಿಭಾಗದ ಮಂತ್ರಿಗಳಾದ ಡಾ. ವೀರಪ್ಪ ಮೊಯಿಲಿ ಅವರ ಸ್ವರ್ಣ ಕಮಲಗಳ ಮೂಲಕ ನೆರವೇರಿತು.

"ಶ್ರೀ ಸಿ.ವಿ. ಗೋಪಿನಾಥರ ತಂದೆ-ತಾಯಿಯರು ಮತ್ತು ಅಣ್ಣ-ತಮ್ಮಂದಿರು ನನಗೆ ಚೆನ್ನಾಗಿ ಪರಿಚಯವಿದ್ದು, ಇವರು ಒಂದು ಅತ್ಯುನ್ನತ ಸಂಸ್ಕೃತಿಯನ್ನು ಬೆಳೆಸಿಕೊಂಡ ಕುಟುಂಬಕ್ಕೆ ಸೇರಿದವರು. ಭಾರತೀಯ, ಪರಂಪರೆಯು ಸರಳ ರೀತಿಯಲ್ಲಿ ವ್ಯಾಖ್ಯಾನ ಮಾಡುವ ವಿಶೇಷವಾದ ಶಕ್ತಿ ಶ್ರೀ ಸಿ.ವಿ. ಗೋಪಿನಾಥ್ ಅವರಿಗೆ ಇದೆ ಮತ್ತು ಅವರಿಂದ ಇನ್ನೂ ಇಂತಹ ಅನೇಕ ಕೆಲಸಗಳನ್ನು ಸಮಾಜ ಬಯಸುತ್ತದೆ" ಎಂದು ಡಾ. ವೀರಪ್ಪ ಮೊಯಿಲಿ ಅವರು ನುಡಿದರು. ಹಾಸ್ಯ ಚಟಾಕಿಯನ್ನು ಹಾರಿಸುತ್ತಾ ಉತ್ತಮ ವಾಗ್ಮಿಗಳಾದ, ಅಯಸ್ಕಾಂತದಂತಿರುವ ಶ್ರೀ ಗೋಪಿನಾಥರ ಭಾಷಣವಿದ್ದಾಗ ತಮಗೆ ಭಾಷಣ ಮಾಡಲು ಅಂಜಿಕೆಯಾಗುತ್ತದೆ ವಿಶೇಷವಾಗಿ ರಾಜಕಾರಣಿಗಳಿಗೆ ಇವರಿಂದ ಹೆದರಿಕೆ ಇದೆ ಎಂದು ನಗೆಗಡಲನ್ನು ಎಬ್ಬಿಸಿದರು.

ವಿಶೇಷ ಅತಿಥಿಯಾಗಿ ನ್ಯಾ. ಧಿರೇನ್ ಕಾರಿಯಾ ಅವರು ಮಾತನಾಡಿ, ಧ್ವನಿ ಮುದ್ರಿಕೆಯನ್ನು ವಿಶ್ಲೇಷಿಸಿ, ಶ್ರೀ ಗೋಪಿನಾಥ್‌ರ ಈ ಕೃತಿ ಮುಂದಿನ ಸಂಶೋಧನೆಗೆ ಆಧಾರ ಸ್ಥಂಭವಾಗುತ್ತದೆ ಎಂದರು. ಈ ಧ್ವನಿ ಮುದ್ರಿಕೆಯಿಂದ ತಾವು ಬಹಳ ಪ್ರಭಾವಿತರಾಗಿದ್ದು, ಗುಜರಾತಿ ಭಾಷೆಯಲ್ಲಿ ಧ್ವನಿಮುದ್ರಿಕೆಯನ್ನು ತರುವ ಜವಾಬ್ದಾರಿಯನ್ನು ತಾವು ಹೊತ್ತಿದ್ದೇವೆ ಎಂದು ಗೋಪಿನಾಥರನ್ನು ಅಭಿನಂದಿಸಿದರು.

ಕರ್ತೃ ಶ್ರೀ ಸಿ.ವಿ.ಗೋಪಿನಾಥರು ಮಾತನಾಡಿ "ಹರಿ ಹಿ ಓಂ"ಎನ್ನುವ ಶಬ್ದದ ವ್ಯಾಖ್ಯಾನವನ್ನು ಮಾಡಿದರು. ಈ ಧ್ವನಿಮುದ್ರಿಕೆಯಲ್ಲಿ ತಾವೇ ಹಿಂದಿ ಭಾಷೆಯಲ್ಲಿ ಧ್ವನಿ ನೀಡಿರುವುದು ತಮ್ಮ ರಾಷ್ಟ್ರ ಭಾಷೆಯ ಪ್ರೀತಿಯ ದ್ಯೋತಕವೆಂದರು. ಇನ್ನು ಮುಂದೆ, ಮರಾಠಿ, ಗುಜರಾತಿ, ತೆಲುಗು, ತಮಿಳು, ಮಲಯಾಳಂ, ಒಡಿಯಾ ಹಾಗು ಪಂಜಾಬಿ ಭಾಷೆಯಲ್ಲಿ ಮುದ್ರಿಕೆಯನ್ನು ತರುವ ಅಭಿಲಾಷೆಯಿದೆ ಎಂದರು. ಭಾರತೀಯ ವಿದ್ಯಾಭವನದ ಸಲಹೆಗಾರರಾದ ಶ್ರೀ ಅಶೋಕ್ ಪ್ರಧಾನ್ ಅವರು ಸ್ವಾಗತ ಭಾಷಣವನ್ನು, ಎನ್.ಎಸ್. ಕಾಶ್ಮೀರ ಸಪ್ನಾಲು ಅಧ್ಯಕ್ಷರಾದ ಪಿ.ಎನ್. ಕಾಚ್ರೂ ಅವರು ವಂದನಾರ್ಪಣೆಯನ್ನು, ಡಾ. ಎಸ್.ಎನ್. ಪಂಡಿತ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು.

# ಸ್ವಾತಂತ್ರ್ಯೋತ್ಸವ ದಿನಾಚರಣೆ

ದಿನಾಂಕ 15.08.2010ರಂದು ದೆಹಲಿ ಕನ್ನಡ ಪ್ರೌಢಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ ದಿನವನ್ನು ಆಚರಿಸಲಾಯಿತು. ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜಿ.ಎಂ. ಲಿಂಗರಾಜು ಅವರು ಧ್ವಜಾರೋಹಣವನ್ನು ಮಾಡಿದರು, ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಅಂಜನಿ ಗೌಡ ಮತ್ತು ಸಂಸ್ಥೆಯ ಇತರ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಶೋಭೆಯನ್ನು ತಂದರು. ಶಾಲೆಯ ಪ್ರಾಚಾರ್ಯರಾದ (ಪ್ರಭಾರ) ಶ್ರೀ ಕೆ.ಟಿ. ಗಣೇಶ್ ಅವರು ಉಪಸ್ಥಿತರಿದ್ದು ಅತಿಥಿಗಳಿಗೆ ಸ್ವಾಗತವನ್ನು ಕೋರಿದರು. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.





# ಚಿಕ್‌ಮಠ್ ಎಫ್.ವಿ. ಅವರ ಕಲಾಕೃತಿ ಪ್ರದರ್ಶನ



"ಏಕ ವ್ಯಕ್ತಿ ಕಲಾಪ್ರದರ್ಶನ"ವನ್ನು ಶ್ರೀ ಬೈಕೆರೆ ನಾಗೇಶ್ ಅವರು ಉದ್ಘಾಟಿಸುತ್ತಿರುವುದು

ದಿನಾಂಕ 15.08.2010ರಂದು ನವದೆಹಲಿಯಲ್ಲಿರುವ ಐಫೆಕ್ಸ್ ಗ್ಯಾಲರಿಯಲ್ಲಿ ಕನ್ನಡದ ಹೆಸರಾಂತ ಶ್ರೇಷ್ಠ ಕಲಾವಿದ ಶ್ರೀ ಚಿಕ್‌ಮಠ್ ಎಫ್.ವಿ. ಅವರ ಇತ್ತೀಚಿನ ಕಲಾಕೃತಿಗಳ ಪ್ರದರ್ಶನವನ್ನು ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ "ಶ್ರೀ ಬೈಕೆರೆ ನಾಗೇಶ್" ಅವರು ಉದ್ಘಾಟಿಸಿ, ಕರ್ನಾಟಕದ ಜನರಲ್ಲಿ ಅನೇಕ ಪ್ರತಿಭೆಗಳಿವೆ ಆದರೆ, ಪ್ರಚಾರ ಹಾಗೂ ಅವಕಾಶ ಕಡಿಮೆ, ದಿಲ್ಲಿಯಲ್ಲಿರುವ ಅನೇಕ ಸೌಲಭ್ಯಗಳನ್ನು ತಿಳಿಸಿ ಅವರಿಗೆ ಸ್ಫೂರ್ತಿ ಕೊಡಬೇಕು, ಆಗ ಇಂತಹ ಮಹಾನ್ ಕಲೆ ಉಳಿಯುತ್ತದೆ, "ಕಲೆಗಾರ ಶಿವನ ಅವತಾರ" ಎಂದು ಹೇಳಿದರು.

ಕೇಂದ್ರ ಲಲಿತಕಲಾ ಅಕಾಡೆಮಿಯ ಉಪಾಧ್ಯಕ್ಷರಾದ ಶ್ರೀ ಕೆ.ಆರ್. ಸುಬ್ಬಣ್ಣ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, ತಾನು ಕಲೆಗಾರನಾಗಿರುವುದರಿಂದ ಕರ್ನಾಟಕದ ಕಲೆಯ ವಿಭಾಗದವರು ಬಂದರೆ, ಅವರಿಗೆ ಸಾಧ್ಯವಾದಷ್ಟು ಪ್ರದರ್ಶನದ ಹಾಗೂ ಪ್ರಚಾರ ಮಾಧ್ಯಮದ ಸಹಾಯ ಮಾಡಲು ಸಿದ್ಧ ಎಂದರು.

ಕರ್ನಾಟಕದ ಇನ್ನೊಬ್ಬ ಕಲಾವಿದ ಶ್ರೀ ಸುಧೀರ ಫಡ್ನೀಸ್ ಅವರು ಕಲೆಗಾರರ ಜೀವನ ಹೆಚ್ಚು ಕಷ್ಟದಿಂದ ಕೂಡಿರುತ್ತದೆ, ಅವರಿಗೆ ದೆಹಲಿಯಲ್ಲಿ ಹೆಚ್ಚಿನ ಅನುಕೂಲ ಕಲ್ಪಿಸುವ ಅಗತ್ಯ ಇದೆ ಎಂದರು.

ಆಗಸ್ಟ್ 15ರಿಂದ ಪ್ರಾರಂಭವಾದ ಕಲಾಪ್ರದರ್ಶನ 21ರವರೆಗೆ ಅತೀ ಯಶಸ್ವಿಯಾಗಿ ನಡೆಯಿತು. ಅನೇಕ ಪತ್ರಕರ್ತರು, ದೃಶ್ಯ ಮಾಧ್ಯಮದವರು, ಶ್ರೀ ಚಿಕ್‌ಮಠ್ ಅವರ ಕಲಾ ಪ್ರದರ್ಶನಕ್ಕೆ ಪ್ರಚಾರ ನೀಡಿದರು. ಅವರು ಚಿಕ್ಕವರಿದ್ದಾಗ ಪ್ರಥಮವಾಗಿ ಕರ್ನಾಟಕದಲ್ಲಿಯ ವನಹಳ್ಳಿ ಗ್ರಾಮದಲ್ಲಿಯರುವ ಮಠದಲ್ಲಿಯ ಶಿಲ್ಪಕೆತ್ತನೆಯ ಚಿತ್ರನೋಡಿ ಬಿಡಿಸಿದಾಗ, ಅನೇಕ ಹಿರಿಯರಿಂದ ಪ್ರಶಂಸೆ ಪಡೆದಾಗ, ಸ್ಫೂರ್ತಿ ಬಂದು ಕಲಾ ಶಾಲೆಗೆ ಸೇರಿಕೊಂಡು ಕಲಾರಾಧಕರಾದರಂತೆ. ಅವರ ಕುಟುಂಬದ ಹಿನ್ನೆಲೆ ಕೃಷಿ ಹಾಗು ಅತೀ ಬಡಕುಟುಂಬ ಅಂತಹ ಪರಿಸ್ಥಿತಿಯಲ್ಲಿ ಶ್ರಮಪಟ್ಟು, ಯಶಸ್ಸನ್ನು ಸಾಧಿಸಿದ ಹೆಗ್ಗಳಿಕೆ ಇವರದು. ಭಾರತದ ಅನೇಕ ಭಾಗಗಳಲ್ಲಿ ಪ್ರದರ್ಶನ ಮಾಡಿದ್ದಲ್ಲದೆ, ವಿದೇಶದಲ್ಲಿ ಕೂಡಾ ತಮ್ಮ ಚಿತ್ರಕಲಾ ಪ್ರದರ್ಶನಗೊಳಿಸಿದ್ದಾರೆ. ಮಸ್ಕತ್‌ನಲ್ಲಿ ಕೂಡಾ ಪ್ರದರ್ಶನ ಅತ್ಯಂತ ಯಶಸ್ವಿಯಾಗಿ ನೆರವೇರಿದ್ದನ್ನು ನೆನಪಿಸಿಕೊಳ್ಳುತ್ತಾ ಕಲೆ ವಿಭಾಗಕ್ಕೆ ಅನೇಕ ಸೌಲಭ್ಯಗಳು ಈಗ ಸಿಗುತ್ತಿವೆ. ಹೀಗಾಗಿ ಕಷ್ಟಪಟ್ಟರೆ ಯಶಸ್ಸು ಖಂಡಿತ ಸಿಗುತ್ತದೆ ಎಂದು ಮುಂದಿನ ಜನಾಂಗಕ್ಕೆ, ತಮ್ಮ ವಿದ್ಯಾರ್ಥಿಗಳಿಗೆ ಸಂದೇಶ ನೀಡಿದರು. ಅವರು ಜನರ ಅಭಿರುಚಿಗೆ ತಕ್ಕಂತೆ ಹೊಸ ಶೈಲಿ ಆದರೆ ಸಂಪ್ರದಾಯ ಬದ್ಧವಾದ ಆಚರಣೆ, ಗ್ರಾಮೀಣ ಪ್ರದೇಶದ ಹಳೆಯ ವಾದ್ಯಗಳು, ಆಟಗಳು ಅಳಿದು ಹೋಗದೆ, ಮುಂದಿನ ಜನಾಂಗಕ್ಕೆ ನೆನಪಿರುವಂತೆ ಮಾಡುವ ದಂಪತಿ ಜೋಡಿ, ಅಥವಾ ಗೆಳತಿಯರ ಸಹೋದರಿಯರ ಜೋಡಿಯ ಚಿತ್ರಗಳನ್ನು ಎಕ್ರಿಲಿಕ್ ಬಣ್ಣ, ವಾಟರ್ ಕಲರ್ ಹೀಗೆ ಕ್ಯಾನ್‌ವಾಸ್ ಬಟ್ಟೆ ಮೇಲೆ ಬಿಡಿಸಿದ್ದು, ಜನರೆಲ್ಲರ ಮನಸೂರೆಗೊಳ್ಳುವಂತಿದ್ದವು. ಅತಿ ಶೀಘ್ರದಲ್ಲಿಯೇ ನ್ಯಾಶನಲ್ ಅವಾರ್ಡ್ ಇತ್ಯಾದಿ ಪ್ರಶಸ್ತಿಗಳು ಸಿಗಲಿ ಎಂದು ಹಾರೈಸೋಣ.

■ **ಡಾ. ಸುಮಂಗಲಾದೇವಿ**

### ಶ್ರೀ ದಯಾನಂದ ಕೆ. ಕಾಮಕರ್ ಅವರ ಚಿತ್ರ ಪ್ರದರ್ಶನ

**ಇದೇ ಸಂದರ್ಭದಲ್ಲಿ ಭಾರತೀಯ ಕಲಾ ಕೇಂದ್ರ ಧಾರವಾಡದ ಶ್ರೀ ದಯಾನಂದ ಕೆ. ಕಾಮಕರ್‌ರವರ ಚಿತ್ರ ಪ್ರದರ್ಶನವೂ ಕೂಡಾ ಐಪೆಕ್ಸ್ ಗ್ಯಾಲರಿಯಲ್ಲಿ ನಡೆಯಿತು. ಸ್ತ್ರೀಯರ ಸ್ಥಾನಮಾನದ ಕುರಿತಂತೆ ಕಾಮ್‌ಕರ್‌ರವರು ರಚಿಸಿದ ಕಲಾಕೃತಿಗಳು ನೈಜವಾಗಿ ಮೂಡಿ ಬಂದಿದ್ದು ಭಾರತದ ಅನೇಕ ಭಾಗಗಳಲ್ಲಿ ಪ್ರದರ್ಶನವನ್ನು ನಡೆಸಿದ್ದಾರೆ.**

## ಓದುಗರ ಪತ್ರ

ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರ ಪ್ರಧಾನ ಸಾರಥ್ಯದಲ್ಲಿ ಭಾರತದ ರಾಜಧಾನಿ ದೆಹಲಿಯಿಂದ ಕರ್ನಾಟಕ ಸಂಘದ ಕನ್ನಡಿಗರೆಲ್ಲರ ಮುಖವಾಣಿಯಾಗಿ ಪ್ರಕಟಗೊಂಡ 'ಅಭಿಮತ' ಮಾಸಿಕದ ಜುಲೈ ಸಂಚಿಕೆ ಹೊರನೋಟದ ಲೇಸರ ಹಿಡಿದುದು ನಿರ್ವಿಕಾರಿ ಎನ್ನಿಸಿದ ಭಗವಾನ್ ಬಾಹುಬಲಿಗೆ ನೀಡುವ ಗೌರವ. ಕರ್ನಾಟಕವನ್ನು ಪ್ರತಿನಿಧೀಕರಿಸಿ ದೆಹಲಿಯಲ್ಲಿ ನೆಲೆ ನಿಂತಿರುವ ಈ ತ್ಯಾಗಮಯಿ ಮಹಾವೀರ ಸ್ವಾಮಿಯ ಹೆಚ್ಚಿನ ವಿವರಣೆ ನೀಡಿದ ಒಳಪುಟದ ಡಾ. ಸುಮಂಗಲಾ ದೇವಿಯವರ ಭಾಷಾ ಶೈಲಿ ಓದುವ ಕುತೂಹಲ ಮೂಡಿಸಿದುದು ನಿಜ.

ಅಭಿವೃದ್ಧಿ ಕಾರ್ಯಗಳಲ್ಲಿ ಪಕ್ಷ ಪಂಗಡವೆಂದು ನಿರ್ಲಕ್ಷ ತೋರಿಸುವ ರಾಜಕಾರಣಿಗಳು ಪರಸ್ಪರ ರಾಜಿ ಮಾಡಿಕೊಳ್ಳಲೇ ಬೇಕಾಗಿರುವ ರಾಜರಸೆಯ ಮಾದರಿ ದಾರಿಯಾಗಿ ತೋರಿ ಬಂದ ಸಂಪಾದಕೀಯ ಬರಹ ಮೇಲ್ಮಟ್ಟದಲ್ಲಿದ್ದರೆ ಹೊರನಾಡ ಕನ್ನಡಿಗರ ಅಖಿಲ ಭಾರತ ಸಮ್ಮೇಳನ, ಮೊಯಿಲಿಯವರ ಮಹಾಗ್ರಂಥ ಬಿಡುಗಡೆ ಸಮರಂಭಗಳ ಸಚಿತ್ರ ವಿವರಣಾ ಬರಹ ಇನ್ನಿತರ ಕಲಾ ಕುಸುಮಗಳು ಸುಗಂಧ ಭರಿತವೆಂದು ದೃಢೀಕರಿಸಿದವು. ಅಭಿನಂದನೆಗಳು.

ಕೀರಿಕ್ಕಾಡು ಮನಮೂಲ, ಕೇಶವ ಭಟ್ಟ
ಕಾಸರಗೋಡು, ಕೇರಳ.

ಉಳ್ಳಾಲ ಶ್ರೀ ಶ್ರೀನಿವಾಸ ಮಲ್ಯರ ಆಕರ್ಷಕ ಮುಖ ಪುಟದೊಂದಿಗೆ ಆಗಸ್ಟ್ 2010ರ 'ಅಭಿಮತ' ಆಪ್ತವಾಯಿತು. ದೆಹಲಿಯಲ್ಲಿರುವ ಶ್ರೀ ಶ್ರೀನಿವಾಸ ಮಲ್ಯರ ಸ್ಮಾರಕದ ಕುರಿತಾಗಿ ಸರೋಜ ವಿಜಯಕುಮಾರ್ ಅವರ ಲೇಖನ ಇಷ್ಟವಾಯಿತು. ಹುಟ್ಟಿದೂರು ಬಿಟ್ಟು ನಗರ ಸೇರಿದವರು ಮಾತ್ರವಲ್ಲ, ಊರಿನಲ್ಲೇ ಉಳಿದವರು ಕೂಡ ತಮ್ಮ ಬೇರುಗಳಲ್ಲಿವೆ ಎಂದು ತಿಳಿದುಕೊಳ್ಳುವ ಅಗತ್ಯ ಯಾವತ್ತೂ ಇದೆ. 'ಅಭಿಮತ'ಕ್ಕೆ ಅಭಿನಂದನೆ.

■ **ಕೆ.ಟಿ. ಗಟ್ಟಿ**

## ಒಂದು ನೆನಪು

**ಆ** ದಿನದಿಂದ ತಾವು ಇರುವವರೆಗೆ
**ನಂ**ಬಿದವರಿಗೆ ಪ್ರೋತ್ಸಾಹಿಸಿ
**ದ**ಕ್ಷತೆಯ ಆಡಳಿತಗಾರರಾಗಿ
**ಕು**ಮುದ ಪುಷ್ಪ ಅರಳುವಂತೆ
**ಮ**ನಬಿಚ್ಚಿ ಮಾತನಾಡುತ್ತಾ ಕಮ್ಮ
**ಟಾ**ದಿಗಳನ್ನು ನಡೆಸಿ
**ಕ**ನ್ನಡದ ಪ್ರಗತಿಗೆ ಕೆಲಸ ಮಾಡುತ್ತಾ ಸಂಘದ
**ರ**ಕ್ಷಣೆಗಾಗಿ ಯೋಜನೆಗಳ ಬಗ್ಗೆ ಸದಾ ಚಿಂತನೆ ಮಾಡುತ್ತಿದ್ದ ಕುಮಟಾಕರ್‌ರವರು ನಮ್ಮೊಡನೆ ಇನ್ನಿಲ್ಲ.

ಹಿರಿಯ ಸಜ್ಜನ ದೆಹಲಿ ಕನ್ನಡಿಗರಾಗಿದ್ದ ಆನಂದ ಕುಮಟಾಕರ್‌ರವರು ಇನ್ನಿಲ್ಲ ಎಂಬ ವಿಷಯ ತಿಳಿದು, ಅತ್ಯಂತ ದುಃಖವಾಯಿತು. ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದಾಗ ನಾನು ಉಪಾಧ್ಯಕ್ಷೆಯಾಗಿ ಕೆಲಸ ಮಾಡಿದ್ದೆ. 4 ವರ್ಷಗಳ ನಂತರ ಅವರು ಕಾವಲು ಸಮಿತಿಯ ಕಾರ್ಯಾಧ್ಯಕ್ಷರಾಗಿದ್ದಾಗ ನಾನೂ ಸಹ ಆ ಸಮಿತಿಯ ಸದಸ್ಯೆಯಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು.

ಅವರು ನನಗೆ ಮಾರ್ಗದರ್ಶಕರಾಗಿ ಗುರುಗಳಾಗಿ ದೆಹಲಿ ಕರ್ನಾಟಕದ ಸಂಘ ಮತ್ತು ದೆಹಲಿ ಕನ್ನಡ ಶಾಲೆಯ ಪ್ರಗತಿಗಾಗಿ ಕೆಲಸ ಮಾಡುವುದಕ್ಕೆ ಉತ್ತಮ ಸಲಹೆ ಕೊಡುತ್ತಿದ್ದರು. ಅವರಿಗೆ ದೃಷ್ಟಿದೋಷವಾದಾಗಿನಿಂದ ಓದಿ ಬರೆಯಲು ಮಾಡಲಿಕ್ಕಾಗದಿದ್ದರೂ ದೂರವಾಣಿಯಲ್ಲೇ ಸಾಕಷ್ಟು ಕನ್ನಡ ನಾಡಿನ ಇತಿಹಾಸ ಅಲ್ಲಿಯ ಬೇರೆ ಬೇರೆ ಭಾಷೆಗಳ ಬಗ್ಗೆ ಮಾತನಾಡುತ್ತಿದ್ದರು. ಇವೆಲ್ಲಾ ನೆನೆಸಿಕೊಳ್ಳುತ್ತಾ ಗತ ವೈಭವಗಳ ನೆನಪು ನನ್ನ ಮನಃಪಟಲದಲ್ಲಿ ಸರಿಯುತ್ತಿದೆ.

■ **ಡಾ. ಅಹಲ್ಯಾಚಿಂತಾಮಣಿ**

## ಮಳೆ ಬಿದ್ದಾಗ. . .

ಅವ್ವ ಹೇಳುತ್ತಿದ್ದಳು  ಊರಿನಲ್ಲಿ
ಭಾರೀ ಮಳೆಯಂತೆ.
ಊರ ನೆನಪಿನ ಹಂಗು ಹಳೇ ~
ಆಲದ ಇಳಲು ಬೇರಿನ ಜೋಕಾಲಿ
ಮತ್ತೆ ..
ಗುಬ್ಬಿ ಗೂಡಿನ ಗುಂಗು.

ಮಳೆಬಿದ್ದು ನೆನೆದ ಸಂಜೆ
ಆಗಸದ ಒಡಲು ಈಗಷ್ಟೆ ಬಿಡಿಸಿಟ್ಟ ಚಿತ್ತಾರ
ಹಸಿ ಹಸಿ ಮಣ್ಣು ಮರದಿಂದ
ತೊಟ್ಟಿಕ್ಕುವ ಕುನುಗು ಕಂಪಿನ ಹನಿ
ಕಣ್ಣು ಬಿಡುವ ಜೀವದ ಹಾಡು.

ಕಪ್ಪಿಟ್ಟ ಮುಗಿಲು ಒಮ್ಮೆಗೇ ಕಡಲಾಗಿ
ನೆಲವೇ ಬಿರಿದು ಭೋರ್ಗರೆಯತೊಡಗಿದರೆ?
ಬಿಸಿಲಿಗೆ ಸುಡುವ ದುಗುಡ
ಬಸವಳಿದ ಬೆವರು, ಬಾಯಾರಿದ ಹೊತ್ತು,
ಎಲ್ಲ ಇಂಗತೊಡಗುತ್ತವೆ ಬಯಲ ಬಸಿರಲ್ಲಿ.

ಮಳೆ ಸುರಿದು ಬರಿದಾದ ಬಾನಲ್ಲಿ,
ಚುಕ್ಕಿ ರಂಗೋಲಿ ಅರಳತೊಡಗುತ್ತವೆ
ನೀಲಿಸಾಲಿನ ಬೆಳ್ಳಿಹಕ್ಕಿ ಪಿಕ್ಕಿಗಳು
ಮುರಳಿಯ ಹಚ್ಚಹಸುರಿನ ಗಾಢ ನೆನಪಲಿ
ಯಮುನೆಗೀಗ ಎಂದಿಲ್ಲದ ಕಾತರತೆ.

ಇದೋ,
ಎಲ್ಲೋ  ನೆಲದಲಿ ಬೀಜವೊಂದು
ಮೊಳಕೆಯೊಡೆವ ತಲ್ಲಣ
ಓಹ್,
ಮೊಗ್ಗೊಂದು ಬಿರಿಗೊಡೆವ ಸದ್ದು
ಅಲ್ಲೇ,
ಹೂವೊಂದು ಉದುರಿ ಮಣ್ಣ ಸೇರಿದ ವ್ಯಥೆ.

## ನನ್ನ ಕವನ

ಛಂದಸ್ಸು~ಸಮಾಸ, ವ್ಯಾಕರಣ,
ಲಘು~ಗುರುಗಳ
ಹಂಗಿಲ್ಲದ
ದ್ವಿಪದಿ, ಚೌಪದಿ, ಷಟ್ಪದಿಗಳ
ಬೆಡಗರಿಯದ
ಹೃದಯದ ಕನವರಿಕೆ
ನನ್ನ ಕವನ..

ಸ್ವರ, ರಾಗ
ಶೃತಿ ತಾಳ,
ನಾದ~ಲಯಗಳು
ಗೊತ್ತಿಲ್ಲದ
ಹಿಮ್ಮೇಳ~ಮುಮ್ಮೇಳ
ವಾದ್ಯ~ಆಲಾಪಗಳ
ಆಡಂಬರವಿಲ್ಲದ
ಭಾವಗಳ ನೆನವರಿಕೆ
ನನ್ನ ಕವನ..

ವೇದ~ಪುರಾಣ
ಕಾವ್ಯ~ಶಾಸ್ತ್ರದ
ಗಂಧವನರಿಯದ !
ಹೂವಿನ ಬಣ್ಣಕೆ
ಚಿಟ್ಟೆಯ ಅಂದಕೆ
ಬಿಸಿಲು~ಮಳೆ ಕಾಮನಬಿಲ್ಲಿಗೆ
ಮಂಜು ಮುತ್ತಿನ ಇಬ್ಬನಿ ಹನಿಗೆ
ಅರಳಿ ಬಿರಿವುದು ಈ ಕವನ.



ರೇಣುಕಾ ನಿಡಗುಂದಿ

## ನೆಟ್ Friend ಜತೆ E–ಸ್ನೇಹ

ಮರೆತು ದಿನವೆಲ್ಲ ಕಾಡುವ ಚಿಂತೆಗಳನ್ನ
ಕೊರಗದೆ ನೆನೆಯುತ ಹಿಂದಿನ ನೋವುಗಳನ್ನ
ಇರಲೆಂದು ನಗುನಗುತಿರಲು ಬೇಕು ಈ ಸ್ನೇಹ
ಮನಕೆ ಸಂತಸ ತರಲು ಬೇಕು ಇ~ಸ್ನೇಹ.

ಸುಪ್ವೀ ಸುವ್ವಮ್ಮ ಲಾಲಿ ಸುವ್ವಲಾಲಿ
ಮಾಡುತಿರೆ ಪಯಣದ  ಹೊಸ ಸ್ನೇಹದ ಹಾದೀಲಿ
ಮೂಡಿಸುತ ಕಾತರವ ನಿನ ಮನಸಿನಲಿ
ಆಡಿದಂತಾಗಿಹುದೆ ಏರಿ ತೂಗುವ ಜೋಕಾಲಿ...?

ಪ್ರಶ್ನೆಗಳು ನೂರಾರು ಮನದಲಿ ಹುಟ್ಟಿರಲು
ಉತ್ತರವ ತಿಳಿಯುವಾ ತವಕದಲಿ ಕಾದಿರಲು
ಒಂದೊಂದಾಗೆಲ್ಲವನು ನಾವರಿತುಕೊಳುತಿರಲು
ದಿನಗಳು ಕ್ಷಣವಾದಂತೆ ಕಾಲವದು ಉರುಳಿರಲು
ಏನೋ ಹೊಸ ಆನಂದವು ಮನಕೆ ಹಿತ ನೀಡಿರಲು
ಕಾಣದಾ ಸವಿ ಅನುಭವವು ಮನವನು ತುಂಬಿತ್ತು
ತುಟಿಗಳಲಿ ನಗುವಾಗಿ ಹೊರಗೆ ಚಿಮ್ಮಿತ್ತು.

ಮೊದಲ ಮಾತಲೆ ನಿನ ನಗುವಿನ ಅಲೆ ಉಲಿದುಲಿದು
ಇಂದೂ ನನ ಕಿವಿಗಳ ತುಂಬ ಝೇಂಕರಿಸುತಿಹುದು
ನನ ಮನವೂ ಖುಶಿಯಿಂದ ಬೀಗುತಿಹುದು
ಊಹಿಸುತ ಈನಗೆ ಸೂಸುವ ತುಟಿಗಳು ಹೇಗಿಹುವೆಂದು

ನೀನಷ್ಟು ಸುಂದರ ಮೊದ ಹೊಂದಿಲ್ಲವೆಂದು
ಹೇಳಿರುವೆ ಹೂವೊಂದಕೆ ಹೋಲಿಸಿ ನೋಡಲೆಂದು.

ಜಗದೊಳಿಹ ಅತಿದೊಡ್ಡ ಹೂ ದೂರದಿಂದಲೆ ಅಂದ
ಸನಿಹ ಸಾಗಲು ಅದು ಸೂಸುವುದು ದುರ್ಗಂಧ
ಎಕ್ಕದ ಹೂಗೂ ಕೂಡ ಇರುವುದು ಅದರದೆ ಅಂದ
ನನಗಂತು ಹೊರಗೆ ನೀ ಹೇಗಿದ್ದರು ಚೆಂದ
ಮನಕೆ ಹಿತ ನೀಡುವುದು ಒಳಗಿನಾ ಆ ಅಂದ
ತರ್ಕ ಮಾಡದೆ ಒಪ್ಪಿ ಇರುವ ದೇಹದ ಅಂದ
ತೋರಿಸುವೆ ನೀನೆಂದೂ ನಿನ ಆ ಮುಖಾರವಿಂದ.

ಹೊರಗೆ ಅಂದದ ದೇಹ~ಒಳಗೆ ಕುರೂಪ ಮನಸು
ಹೇಗೇ ಇರಲಿ ಹೊರಗೆ ಒಳಗಿರಲು ಸುಂದರ ಮನಸು
ಚೆಂದದ ಚಿಂತನೆಗಳು ಇರಲದೆಷ್ಟು ಸೊಗಸು
ಎರಡು ಮನಗಳ ಅನಿಸಿಕೆಗಳೊಂದಾಗಿದ್ದರೆ ಸಾಕು
ಉಳಿದೆಲ್ಲ ಚಿಂತೆಗಳು ನಮಗೇಕೆ ಬೇಕು...?

ನಿನ ತುಟಿಗಳಲಿ ಹೀಗೆ ಎಂದೂ ನಗು ಸೂಸಿರಲಿ
ಅನುದಿನವು ಮನಸಿನಲಿ ಸಂತಸ ತುಂಬಿರಲಿ
ನಮ್ಮೀ ಸ್ನೇಹವು ಎಂದು ಹೀಗೇ ಬೆಸೆದಿರಲಿ
ನೆಮ್ಮದಿಯ ಜೀವನ ಪಯಣ ಹೀಗೇ ಸಾಗುತಲಿರಲಿ...?



ಎಚ್.ವಿ. ಶಿವರುದ್ರಪ್ಪ

ವ್ಯಕ್ತಿ ದರ್ಶನ

# ಆದರ್ಶ ವ್ಯಕ್ತಿತ್ವದ ಬಸವರಾಜ ಕಲ್ಲೂರ



ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕಾರ್ಯಕ್ರಮ ನಡೆದಾಗಲೆಲ್ಲಾ ಸಭಾಂಗಣದ ಎಡಭಾಗದ ಸಾಲಿನಲ್ಲಿ ಹಿರಿಯ ದಂಪತಿಗಳಿಬ್ಬರು ಕಾಣ ಸಿಗುತ್ತಾರೆ. ಆ ಎರಡು ಕುರ್ಚಿಗಳು ಖಾಯಂ ಆಗಿ ಅವರಿಗೆ ಕಾದಿರಿಸಿದ ಹಾಗೆ! ಆರು ಅಡಿ ಎತ್ತರ, ಅಜಾನುಬಾಹು, ಈಗಲೂ ಗಟ್ಟಿ ಮುಟ್ಟು, ಇವರು ಬೇರಾರು ಅಲ್ಲ, ನಮ್ಮೆಲ್ಲರ ಆತ್ಮೀಯ ಶ್ರೀ ಬಿ.ಎಸ್. ಕಲ್ಲೂರ್. ಕಾರ್ಯಕ್ರಮಕ್ಕೆ ಬಂದಾಗಲೆಲ್ಲಾ ಶ್ರೀಮತಿ ಜೊತೆಗೂಡಿ ಅವರ ಬರುವಿಕೆ, ಅವರಲ್ಲಿರುವ ಅನೋನ್ಯತೆಯನ್ನು ನಮ್ಮ ಯುವ ಜನಾಂಗ ನೋಡಿ ಕಲಿಯಬೇಕು ಅಥವಾ ನಾಚಿಕೊಳ್ಳಬೇಕು.

1942ರ ಫೆಬ್ರವರಿ 15ರಂದು ಧಾರವಾಡದಲ್ಲಿ ಶ್ರೀ ಬಿ.ಎಸ್. ಕಲ್ಲೂರ್ ಅವರ ಜನನ. ತಂದೆ ಶ್ರೀ ಸಿದ್ಧರಾಮಪ್ಪ ಕಲ್ಲೂರ್ ಪೋಲಿಸ್ ಇಲಾಖೆಯಲ್ಲಿ ಡಿ.ಎಸ್.ಪಿ. ಆಗಿ ಸೇವೆ ಸಲ್ಲಿಸಿ ಐದು ಬಾರಿ ಶೌರ್ಯ ಪ್ರಶಸ್ತಿ ಪಡೆದವರು. ತಾಯಿ ಶ್ರೀಮತಿ ಪಾರ್ವತಿ ದೇವಿ. ಮುಂಬಯಿ ಲಾ ಕಾಲೇಜಿನಲ್ಲಿ ಕಾನೂನು ಪದವಿ ಪಡೆದು 1967ರಲ್ಲಿ ಕೇಂದ್ರ ಮೀಸಲು ಪಡೆಯ ಡಿ.ಎಸ್.ಪಿ. ಆಗಿ ಸೇವೆಯನ್ನು ಆರಂಭಿಸಿದ ಶ್ರೀ ಬಿ.ಎಸ್. ಕಲ್ಲೂರ್ ದೇಶದ ವಿವಿಧ ಗಡಿ ಪ್ರದೇಶಗಳಲ್ಲಿ ದೇಶದ್ರೋಹಿಗಳನ್ನು ಬಗ್ಗು ಬಡಿದು, ಜಾಣ್ಮೆ ಹಾಗೂ ದಿಟ್ಟತನದಿಂದ ಹೋರಾಡಿ ದೇಶ ಸೇವೆ ಸಲ್ಲಿಸಿದ ಇವರಿಗೆ ಇಪ್ಪತ್ತೆರೆಡು ಬಾರಿ ಸೇವಾ ಪದಕಗಳನ್ನು ನೀಡಿ ಗೌರವಿಸಲಾಗಿದೆ. ಬಸವರಾಜ್ ಕಲ್ಲೂರ್ ಗಟ್ಟಿ ದೇಹದ ಜೊತೆಗೆ ಬುದ್ಧಿವಂತಿಕೆ, ಸಾಂಧರ್ಬಿಕವಾಗಿ ತಕ್ಷಣ ತೆಗೆದುಕೊಳ್ಳುವ ಜಾಣ್ಮೆಯ ನಿರ್ಧಾರಗಳಿಂದ ಉನ್ನತ ಹುದ್ದೆಗೇರಬಹುದು ಎನ್ನುವುದಕ್ಕೆ ಉದಾಹರಣೆ. ಮಿಝೋಹಿಲ್ಸ್, ನಾಗಾಲ್ಯಾಂಡ್, ಮಣಿಪುರ, ಜಮ್ಮು–ಕಾಶ್ಮೀರ, ಪಂಜಾಬ, ಗುಜರಾತ್, ಹಿಮಾಚಲ ಪ್ರದೇಶ, ಹೀಗೆ ಅತಿ ಭಯಾನಕ ಭಯೋತ್ಪಾದಕ, ಸಾವಿನ ಅಂಚಿನಲ್ಲಿರುವ ಪ್ರದೇಶಗಳಲ್ಲಿದ್ದು ಪ್ರತಿ ಕ್ಷಣಗಳಲ್ಲಿ ಇಡೀ ದೇಹವನ್ನು ಕಣ್ಣಾಗಿಸಿ, ದ್ರೋಹಿಗಳ ಚಲನವಲನಗಳನ್ನು ಗುರುತಿಸಿ ಅವರು ಸಿಡಿಸುವ ಮದ್ದು–ಗುಂಡುಗಳನ್ನು ಎದುರಿಸಿ, ಹಿಮ್ಮೆಟ್ಟಿಸುವ ಎದೆಗಾರಿಕೆ ತೋರಿದ್ದು ನಿಜಕ್ಕೂ ಪ್ರಶಂಸನೀಯ, ನ್ಯಾಶನಲ್ ಸೆಕ್ಯುರಿಟಿ ಗಾರ್ಡ್‌ನ ನಾಯಕತ್ವ ವಹಿಸಿ ನಕ್ಸಲರ್ ಮತ್ತು ರಾಷ್ಟ್ರ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವವರ ಸದ್ದನ್ನು ಅಡಗಿಸಿದ ಹೆಮ್ಮೆ ಬಸವರಾಜರದು, ಬ್ಲ್ಯಾಕ್‌ಕ್ಯಾಟ್ ಕಮಾಂಡರ್ ಆಗಿ ದೇಶದ ಗಣ್ಯ ನಾಯಕರ ರಕ್ಷಣೆಯ ಜವಾಬ್ದಾರಿ ವಹಿಸಿದ ಇವರು ಸಿ.ಆರ್.ಪಿ.ಎಫ್. ನ ಕಮಾಂಡೆಂಟ್ ಹುದ್ದೆಗೇರಿದರು. ಪಂಜಾಬ್ ಮತ್ತು ಜಮ್ಮು–ಕಾಶ್ಮೀರದಲ್ಲಿ ನಡೆಸಿದ ಕಾರ್ಯಾಚರಣೆಗಳಿಗೆ ಶ್ಲಾಘನೆ ದೊರೆಯಿತಲ್ಲದೇ 1990ರಲ್ಲಿ ಶೌರ್ಯತನಕ್ಕಾಗಿ ಪೋಲಿಸ್ ಪದಕ, 1996ರಲ್ಲಿ ರಾಷ್ಟ್ರಪತಿಗಳಿಂದ ವಿಶೇಷ ಆರಕ್ಷಕ ಸೇವಾ ಪದಕ ಇದಲ್ಲದೇ ಸಮರ ಸೇವಾ ಪದಕ, ಯುದ್ಧ ಪದಕ, ಗಾಯಾಳು ಪದಕ, ಕಠಿಣ ಸೇವಾ ಪದಕ, ಇಪ್ಪತ್ತೈದನೆಯ ಮತ್ತು ಐವತ್ತನೆಯ ಸ್ವಾತಂತ್ರ್ಯ ದಿನದಂದು ವಿಶೇಷ ಪದಕ, ಒಟ್ಟು ಇಪ್ಪತ್ತೆರಡು ಪದಕಗಳನ್ನು ಪಡೆದು ದೇಶ ಪ್ರೇಮವನ್ನು ಮೆರೆದ ಕನ್ನಡಿಗನಾಗಿ ಮಿಂಚಿದ ಬಸವರಾಜ ಕಲ್ಲೂರರವರು 1997ರಲ್ಲಿ ನಿವೃತ್ತಿಯಾದರು.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಹಿರಿಯ ಅರಕ್ಷಕ ಮೇಲ್ವಿಚಾರಕರಾಗಿ ಕೆನಡಾ ದೇಶದ ಮಾಂಟ್ರಿಯಲ್, ಒಟ್ಟಾವಾ, ಟೋರೆಂಟೋಗಳಲ್ಲಿ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ವಿವಿಧ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ದಕ್ಷತೆಯನ್ನು ಪ್ರದರ್ಶಿಸಿದರು. ಮಾನವ ಹಕ್ಕುಗಳ ಉಲ್ಲಂಘನೆಯ ವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ತೊಂದರೆಗೀಡಾದವರಿಗೆ ನ್ಯಾಯವನ್ನು ದೊರಕಸಿಕೊಟ್ಟು ಇವರು ವೃತ್ತಿಗೆ ಸಂಬಂಧಿಸಿದಂತೆ ಹಲವಾರು ತರಬೇತಿಗಳನ್ನು ಪಡೆದು ಬೇರೆ ಬೇರೆ ವಿಭಾಗಗಳಲ್ಲಿ ಕಾರ್ಯ ಮಾಡಿ ಶಿಸ್ತು, ಸಂಯಮ, ಜಾಣ್ಮೆ ಪ್ರದರ್ಶಿಸಿದವರು.

ದೆಹಲಿ ಬಾರ್ ಕೌನ್ಸಿಲ್‌ನ ಸದಸ್ಯರಾಗಿದ್ದ ಇವರು ರೇಖಿ ವಿದ್ಯೆಯಲ್ಲಿ ಪ್ರಭುತ್ವ ಹೊಂದಿ, ದೇಶ ರಕ್ಷಣೆಯ ವಿಷಯದಲ್ಲಿ ಕಾನೂನು ತಿಳುವಳಿಕೆಯ ಉಪನ್ಯಾಸಕರಾಗಿ, ಬಸವಕೇಂದ್ರದ ಸದಸ್ಯರಾಗಿ, ಸಧ್ಯಕ್ಕೆ ದೆಹಲಿ ಮಹಾನಗರದ ವಿಶೇಷ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ ಭಾಷೆಗಳನ್ನು ಬಲ್ಲ ಬಿ.ಎಸ್. ಕಲ್ಲೂರರವರ ಧರ್ಮಪತ್ನಿ ಶ್ರೀಮತಿ ಉಮಾ, ಒಬ್ಬನೇ ಮಗ ಶಿವರಾಜ ಸೊಸೆ ನೀಲಂ, ಒಬ್ಬಳೇ ಮಗಳು ಗೌರಿ, ಅಳಿಯ ಪ್ರಕಾಶ, ನಾಲ್ವರು ಮೊಮ್ಮಕ್ಕಳು ವಾನಿಯಾ, ಸಾನಿಯಾ, ಮೀರ್ ಮತ್ತು ಸಿದ್ಧಾಂತ. ಆರೂವರೆ ದಶಕದ ಬಿ.ಎಸ್. ಕಲ್ಲೂರ್ ಅವರ ಬದುಕಿನಲ್ಲಿ ಸಂತೃಪ್ತಿಯ ಜೊತೆಗೆ ಸಾಹಸಗಳಿವೆ, ಸಾಧನೆಗಳಿವೆ, ಹೋರಾಟ ಪ್ರವೃತ್ತಿಯ ಯುವಕರಿಗೆ ಸ್ಫೂರ್ತಿದಾಯಕ ಪಾಠವಾಗುವ ಅನೇಕ ಕಾರ್ಯಗಳಿವೆ. ಬಸವರಾಜ ಕಲ್ಲೂರರವರ ವ್ಯಕ್ತಿತ್ವ ಕನ್ನಡಿಗರು ಅಭಿಮಾನ ಪಡುವಂತಹದ್ದು. ಅವರೀಗ Arbitrator to Govt. of Delhi Registrar Co.op society ಆಗಿದ್ದಾರೆ.

■ ವಸಂತ ಶೆಟ್ಟಿ ಬೆಳ್ಳಾರೆ

## ಅಭಿನಂದನೆ



ದೆಹಲಿ ಕನ್ನಡತಿ ಕುಮಾರಿ ಕಲ್ಪನಾ ರಾಜಸ್ಥಾನದ ಚುರು ಜಿಲ್ಲೆಯ ತಾಲ್ ಚಾಪರ್ ಪಕ್ಷಿಧಾಮ (ತಾಲ್ ಚಾಪರ್ ಸ್ಯಾಂಚೂರಿ) ದಲ್ಲಿ 'ಸಣ್ಣ ಬಾಲದ ಹಲ್ಲಿಗಳು ಮತ್ತು ಪರಿಸರ ಸಂತುಲನೆ' ಎಂಬ ವಿಷಯದ ಮೇಲೆ ವಿಶೇಷವಾದ ಸಮೀಕ್ಷೆ ನಡೆಸುವುದಕ್ಕಾಗಿ ಮೂವರು ಸದಸ್ಯರ ತಂಡದೊಂದಿಗೆ ಗುರು ಗೋವಿಂದ ಸಿಂಗ್ ಇಂದ್ರಪ್ರಸ್ಥ ಯುನಿವರ್ಸಿಟಿ ವತಿಯಿಂದ ಹೋಗಿದ್ದರು. ಸಣ್ಣ ಬಾಲದ ಹಲ್ಲಿಗಳು ಉರುಟಾದ ತಲೆ ಮತ್ತು ಚಪ್ಪಟೆಯಾದ ಸೊಂಡಿಲನ್ನು ಹೊಂದಿವೆ. ಇವುಗಳು ಹಗಲಿನ ವೇಳೆಯಲ್ಲಿ ಸಕ್ರಿಯವಾಗಿರುತ್ತವೆ ಮತ್ತು ರಾತ್ರಿಯ ವೇಳೆಯಲ್ಲಿ ಹೊಂಡದ ಒಳಗೆ ನುಸುಳಿಕೊಳ್ಳುತ್ತವೆ. ಪರಿಸರ ರಕ್ಷಣೆಗಾಗಿ ನಶಿಸಿಹೋಗುತ್ತಿರುವ ಈ ಸಂತತಿಯ ತೀವ್ರವಾದ ಅಗತ್ಯವಿದೆ. ರಾಜಸ್ಥಾನದ ಅರಣ್ಯ ಇಲಾಖೆ ಮತ್ತು ಇಂದ್ರಪ್ರಸ್ಥ ಯುನಿವರ್ಸಿಟಿ ಕಲ್ಪನಾ ತಯಾರಿಸಿರುವ ಸಮೀಕ್ಷೆಯನ್ನು ಮೆಚ್ಚಿ ಪ್ರಶಂಶಿಸಿದ್ದಾರೆ. ಈಕೆ ದೆಹಲಿಯ ಗುರು ಗೋವಿಂದ್ ಸಿಂಗ್ ಇಂದ್ರಪ್ರಸ್ಥ ಯುನಿವರ್ಸಿಟಿಯಲ್ಲಿ ಎಂ.ಎಸ್.ಸಿ. (ಬಯೋಡೈವರ್ಸಿಟಿ)ಯ ಪ್ರಥಮ ವರ್ಷದ ಅಂತಿಮ ಪರೀಕ್ಷೆಯಲ್ಲಿ 80% ಫಲಿತಾಂಶ ಪಡೆದಿದ್ದಾರೆ. ದೆಹಲಿ ಕರ್ನಾಟಕ ಸಂಘದ ಸದಸ್ಯ ಶ್ರೀ ಚಿತ್ತರಂಜನ ದಾಸ್ ಅವರ ಪುತ್ರಿ ಕಲ್ಪನಾ ಅವರಿಗೆ ಸಂಘದ ಶುಭಾಶಯಗಳು.

## ಕರ್ನಾಟಕ ವಾರ್ತಾ ಇಲಾಖೆಗೆ ಗಿರೀಶ್ ಎಲ್.ಪಿ.



ದೆಹಲಿಯ ಕರ್ನಾಟಕ ವಾರ್ತಾ ಇಲಾಖೆಗೆ ಶ್ರೀ ವೀರಣ್ಣ ಕಮ್ಮಾರ ಅವರು ಬೆಂಗಳೂರಿಗೆ ವರ್ಗಾವಣೆಗೊಂಡ ನಂತರ ಅವರ ಸ್ಥಾನಕ್ಕೆ ಗಿರೀಶ್ ಎಲ್.ಪಿ. ಅವರು ಸಹಾಯಕ ನಿರ್ದೇಶಕರಾಗಿ ಬಂದಿದ್ದಾರೆ. ಇವರು ಮೂಲತ: ಮೈಸೂರಿನವರು. ಎಂ.ಎ. (ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ)ದಲ್ಲಿ ಶಿಕ್ಷಣವನ್ನು ಪಡೆದಿದ್ದಾರೆ. ಇನ್ನೂ ಎಳೆಯ ವಯಸ್ಸಿನವರಾಗಿರುವ ಗಿರೀಶ್ ಅವರು ಈ.ಟಿವಿ, ರಾಮೋಜಿರಾವ್ ಪಿಲ್ಮ್ ಸಿಟಿ ಹೈದರಾಬಾದ್, ಉಷಾಕಿರಣ ಪತ್ರಿಕೆ ಮತ್ತು ಟೈಮ್ಸ್ ಆಫ್ ಇಂಡಿಯಾ (ಕನ್ನಡ) ದಿನಪತ್ರಿಕೆಯಲ್ಲಿ ವರದಿಗಾರನಾಗಿ, ಟಿ.ವಿ 9 ನಲ್ಲಿ ಮೈಸೂರು ವಿಭಾಗದ ವರದಿಗಾರನಾಗಿ ಮೂರು ವರ್ಷ ಕಾರ್ಯ ನಿರ್ವಹಿಸಿದ್ದಾರೆ. ಕೆ.ಪಿ.ಎಸ್.ಸಿ ನಡೆಸಿದ ಸ್ಪರ್ದಾತ್ಮಕ ಪರೀಕ್ಷೆ ಮೂಲಕ 2010 ಜನವರಿ ತಿಂಗಳಿನಲ್ಲಿ ವಾರ್ತಾಇಲಾಖೆಗೆ ಸೇರ್ಪಡೆಯಾಗಿದ್ದಾರೆ.

ಕನ್ನಡದ ಕಲೆ, ಸಂಸ್ಕೃತಿ ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ದೆಹಲಿ ಕರ್ನಾಟಕ ಸಂಘದೊಡನೆ ಉತ್ತಮವಾಗಿ ಸ್ಪಂದಿಸಲೆಂಬ ಹಾರೈಕೆಯೊಂದಿಗೆ ಗಿರೀಶ್ ಅವರಿಗೆ ನಮ್ಮ ಸ್ವಾಗತ.

ದೆಹಲಿ ಕನ್ನಡಿಗರು ಈ ಕೆಳಗಿನ ಸಂಪರ್ಕಗಳ ಮೂಲಕ ಗಿರೀಶ್ ಅವರನ್ನು ವಾರ್ತಾ ಇಲಾಖೆಗೆ ಸಂಬಂಧಿಸಿದ ಮಾಹಿತಿಗಳಿಗೆ ಸಂಪರ್ಕಿಸಬಹುದು.

ಮೊಬೈಲ್ ಸಂಖ್ಯೆ : 9968652139, 09916227777

ಕಚೇರಿ : 011–24102263

ಇಮೇಲ್ : mysoregirish@yahoo.com, nakul.mysore@gmail.com

# ‘ಸಂಘದ ಅಂಗಳದಲ್ಲಿ ಕಾವ್ಯ’

‘ಸಂಘದ ಅಂಗಳದಲ್ಲಿ ಕಾವ್ಯ’ ಕಾರ್ಯಕ್ರಮದ ಅಂಗವಾಗಿ ದಿನಾಂಕ 22.08.2010ರ ಸಾಯಂಕಾಲ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಡಾ. ವೆಂಕಟಾಚಲ ಹೆಗಡೆಯವರ ಅಧ್ಯಕ್ಷತೆಯಲ್ಲಿ ಕಾವ್ಯಗೋಷ್ಠಿ ಜರುಗಿತು. ಪ್ರಾರಂಭದಲ್ಲಿ ಶ್ರೀ ಸಖಾರಾಮ ಉಪ್ಪೂರುರವರು “ಬಾರಿಸು ಕನ್ನಡ ಡಿಂಡಿಮವ” ಹಾಗೂ “ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು” ಎಂಬ ಸ್ಫೂರ್ತಿದಾಯಕ ಕವಿತೆಗಳೊಂದಿಗೆ ಎಲ್ಲರಿಗೂ ಸ್ಫೂರ್ತಿಯನ್ನು ನೀಡಿದರು. ನಂತರ ಸ್ಥಳೀಯ ಕನ್ನಡ ಕವಿಗಳಾದ ಶ್ರೀಮತಿ ಸರೋಜಾ ಮಾಧವ, ಶ್ರೀಮತಿ ಜಮುನಾ ಸಿ.ಮಠದ, ಶ್ರೀಮತಿ ಪಿ. ಸ್ವರ್ಣಲತಾ ಗೋವಿಂದರಾಜ್, ಶ್ರೀ ಎನ್.ಎ. ಮಾಧವ, ಶ್ರೀ ಚೆನ್ನು ಎಸ್. ಮಠದ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಶ್ರೀ ಸಖಾರಾಮ ಉಪ್ಪೂರು, ಶ್ರೀ ಕೆ.ಎಸ್.ಜಿ. ಶೆಟ್ಟಿ, ಶ್ರೀ ಪ್ರೇಮಶೇಖರ, ಶ್ರೀ ಬಾಲಕೃಷ್ಣ ನಾಯ್ಕ್ ಡಿ., ಶ್ರೀ ವೈ. ಅವನೀಂದ್ರನಾಥ್ ರಾವ್, ಶ್ರೀ ಮಹಾಭಲೇಶ್ವರ ಭಟ್, ಶ್ರೀ ಎಚ್.ವಿ. ಶಿವರುದ್ರಪ್ಪ, ಶ್ರೀ ಗೋವಿಂದರಾಜ್, ಶ್ರೀ ರೇಶ್ಮಿ ಸ್ವರಚಿತ ಕವಿತೆಗಳನ್ನು ವಾಚಿಸಿದರು. ಅಧ್ಯಕ್ಷತೆ ವಹಿಸಿದ್ದ ಡಾ. ವೆಂಕಟಾಚಲ ಹೆಗಡೆಯವರು ಕವಿತೆಗಳನ್ನು ವಾಚಿಸಿದವರೆಲ್ಲರನ್ನೂ ಪ್ರಶಂಸಿಸುತ್ತಾ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕವಿಗಳು ಮುಂಬರುವ ದಿನಗಳಲ್ಲಿ ಕಾವ್ಯಗೋಷ್ಠಿಯಲ್ಲಿ ಭಾಗವಹಿಸಲು ಕೋರಿದರು. ಈಗಲೂ ಅಫಘಾನಿಸ್ತಾನದ ಕಾಬೂಲ್, ಅರಬ್, ಇರಾನ್, ಇರಾಕ್‌ಗಳಲ್ಲಿ ಪ್ರೇಮ ವಿವಾಹದ ಬಗ್ಗೆ ಇರುವ ಮೂಢನಂಬಿಕೆಯಿಂದ ಸ್ತ್ರೀಶೋಷಣೆಯ ವಿಷಯ ತಿಳಿದು ಬಹುನೊಂದು ಬರೆದ ಕವನ ವಾಚಿಸಿದರು, ಕವಿತೆ ಮನಕಲಕುವಂತಿತ್ತು. ಹೀಗೆ ಕವಿಗಳ ಸಮ್ಮೇಳನ ತಿಂಗಳಿಗೊಂದಾದರೂ ಆಗುತ್ತಿದ್ದರೆ, ಕವಿತೆ ರಚಿಸಲು ಸ್ಫೂರ್ತಿ ಬರುತ್ತದೆ ಮತ್ತು “ಅನೇಕ” ಎಂಬ ಕವನ ಸಂಕಲನದಲ್ಲಿ 27 ಪುರುಷ 15 ಸ್ತ್ರೀ ಕವಿಯಿತ್ರಿಗಳ 112 ಕವಿತೆಗಳ ಪುಸ್ತಕ ಹೊರತಂದಂತೆ ಇನ್ನೂ ಕೆಲವು ಕವನಸಂಕಲನಗಳನ್ನು ಹೊರತರಲು ಸಾಧ್ಯವಾಗುತ್ತದೆ ಎಂದು ವಸಂತ ಶೆಟ್ಟಿ ಬೆಳ್ಳಾರೆಯವರು ಹೇಳಿದರು.

■ **ಡಾ. ಸುಮಂಗಲಾದೇವಿ**



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿರುವ ಡಾ. ವೆಂಕಟಾಚಲ ಹೆಗಡೆಯವರು



ಸಂಘದ ಅಂಗಳದಲ್ಲಿ ಕಾವ್ಯದ ಕೆಲವು ದೃಶ್ಯಾವಳಿಗಳು

# ಜನಕಪುರಿ ಕನ್ನಡ ಕೂಟದ ಸಾಮೂಹಿಕ ಸತ್ಯನಾರಾಯಣ ಪೂಜೆ



ವಿದ್ಯಾರ್ಥಿ ವೇತನ ವಿತರಣೆ




ಪೂಜೆಯಲ್ಲಿ ಪಾಲ್ಗೊಂಡ ಕೂಟದ ಸದಸ್ಯರು

ಜನಕಪುರಿ ಕನ್ನಡ ಕೂಟದ ವತಿಯಿಂದ ಆಗಸ್ಟ್ 8, 2010ರಂದು ದ್ವಾರಕದ ಸೆಕ್ಟರ್-9ರಲ್ಲಿರುವ "ಪ್ರಶಾಂತಿ ಧಾಮ ಸಾಯಿ ಮಂದಿರ"ದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆಯನ್ನು ಏರ್ಪಡಿಸಲಾಗಿತ್ತು. ದೆಹಲಿಯ ಎಲ್ಲಾ ಸ್ಥಳಗಳಿಂದಲೂ ಬಂದ ಭಕ್ತಾದಿಗಳಿಂದ ಪೂಜೆಗೆ ಮೆರುಗುಕೊಟ್ಟಂತ್ತಿತ್ತು. ಅಧ್ಯಕ್ಷರಾದ ಶ್ರೀ ರಾಮಕೃಷ್ಣ ಬಿ.ಎಸ್. ಹಾಗೂ ಅವರ ಶ್ರೀಮತಿಯವರು ಪೂಜೆಯನ್ನು ನೆರವೇರಿಸಿದರು. ನೆರೆದಿದ್ದ ಜನ ಸಂದಣಿಯಲ್ಲಿ ಭಕ್ತಾದಿಗಳು ದೇವರ ಹಾಡುಗಳನ್ನು ಹಾಡಿ ಭಕ್ತಿ ಹೆಚ್ಚಿಸಿದರೆ, ಹನುಮಂತ ಆಚಾರ್ಯರ ಮಂತ್ರ ಘೋಷಣೆ ಮೈನವಿರೇಳಿಸುವಂತ್ತಿತ್ತು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ಅನೇಕ ಕನ್ನಡ ಪರ ಸಂಸ್ಥೆಗಳಿಂದ ಗಣ್ಯರು ಆಗಮಿಸಿದ್ದರು.

■ ವೆಂಕಟೇಶ್ ಎಂ.ವಿ.

# ಬೆಂಗಳೂರಿನಲ್ಲಿ 'ಮುರಗೋಡರ ಗುರುಕಲಾ ಕುಟೀರ' ಶಂಕು ಸ್ಥಾಪನೆ



ಬೆಳಗಾವಿ ಜಿಲ್ಲೆ ಮೂಲದ ದೆಹಲಿ ಕನ್ನಡಿಗರೂ, ಅಂತರರಾಷ್ಟ್ರೀಯ ಖ್ಯಾತ ಕಲಾವಿದರಾದ ಭೀಮರಾವ್ ಮುರಗೋಡ ಅವರು ಬೆಂಗಳೂರಿನ ಸಹಕಾರ ನಗರದಲ್ಲಿ ಕಳೆದ ಬುದ್ಧ ಪೂರ್ಣಿಮೆಯ ದಿನ ಒಂದೂವರೆ ಕೋಟಿ ರೂಪಾಯಿಗೆ ತೆಗೆದುಕೊಂಡ ಸ್ಥಳದಲ್ಲಿ ದಿನಾಂಕ 09.07.2010ರಂದು 'ಮುರಗೋಡರ ಗುರುಕಲಾ ಕುಟೀರ' ಲಲಿತ ಕಲೆಗಳ ಸಾಂಸ್ಕೃತಿಕ ಸಂಘಟನೆಯ ಶಿಲಾನ್ಯಾಸ ನೆರವೇರಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಈ ಕಾರ್ಯಕ್ರಮಕ್ಕೆ ಹಿಂದು, ಮುಸ್ಲಿಂ, ಸಿಖ್, ಇಸಾಯಿ ಧರ್ಮ ಗುರುಗಳು ಆಗಮಿಸಿ, ಶಿಲಾನ್ಯಾಸದ ಜ್ಯೋತಿ ಬೆಳಗಿಸಿ, ಗುದ್ದಲಿ ಪೂಜೆಯೊಂದಿಗೆ ಕಟ್ಟಡ ಕಟ್ಟುವ ಇಟ್ಟಿಗೆ ಇಟ್ಟು ಪ್ರಾರಂಭಿಸಿದರು.

ಇದೇ ಶುಭಾರಂಭದ ಸಮಯ ಹಾಗೂ ಸ್ಥಳದಲ್ಲಿ ಆನಂದ ಮುರಗೋಡರ ಹಾಸನದಲ್ಲಿ ಜನ್ಮ ತಾಳಿದ ಮಗಳಿಗೆ ಹಿಂದೂ ಧರ್ಮದ ರಾಘವೇಂದ್ರ ಮಠ, ಯಲಹಂಕದ ಗುರುಗಳಾದ ಜ್ಯೋತಿ ಸ್ವರೂಪರು, ಮಗುವಿಗೆ 'ಅನುರಾಧ' ಎಂದು ನಾಮಕರಣ ಮಾಡಿದರೆ, ಮೌಲವಿ ಇಮಾಮ ಮಹಮ್ಮದ್ ಜಾಕೀರ ಜಾಮಿಯಾ, ಯಲಹಂಕ ನ್ಯೂಟಾನ ಇವರು 'ಇಶಾ ಪ್ರವೀತಾ' ಎಂದು ನಾಮಕರಣ ಮಾಡಿದರು. ಅದೇ ರೀತಿಯಾಗಿ ಯಲಹಂಕದ ಲೇಡಿ ಆಸಿ ಸ್ಟಾಯ್ಯಿಲನ್‌ಕ್ಕಾಗಿ ಚರ್ಚ್‌ನಿಂದ ಆಗಮಿಸಿದ ಫಾದರ್ ಜೋಸೆಫ್ ಅವರು 'ಮೇರಿ' ಎಂದು ನಾಮಕರಣ ಮಾಡಿದರೆ ಸಹಕಾರ ನಗರದ ಗುರು ಹರಭಜನ ಸಿಂಗ್‌ರವರು 'ಸಹರ ಪ್ರೀತ' ಎಂದು ನಾಮಕರಣ ಮಾಡಿದರು.

ಎಂಟು ವರ್ಷದ ಹಿಂದೆ ದೆಹಲಿಯ ಸೌತ್‌ಎಕ್ಸ್, 33 ಅಮೃತನಗರದಲ್ಲಿ ಗುರು ಕಲಾ ಕುಟೀರ ಕಲಾ ಸಂಗ್ರಹಾಲಯ ಸಾಂಗ್ಲಿಯಾನಾ ಎಂ.ಪಿ. ಅವರಿಂದ ಉದ್ಘಾಟನೆ ಆದದ್ದು ನೆನಪಿರಬಹುದು. ಭಾರತದ ಅನೇಕ ಸ್ಥಳಗಳಿಂದ ಬಂದ ಎಲ್ಲಾ ಮುರಗೋಡರ ಸಂಸಾರ ಸಂಬಂಧಿಕರು ದೆಹಲಿ, ಮುಂಬೈ, ಹುಬ್ಬಳ್ಳಿ, ಧಾರವಾಡ, ಮೈಸೂರು, ಹಾಸನ, ಬೆಳಗಾವಿ, ಗೋಕಾಕ, ರಾಮದುರ್ಗಗಳಿಂದ ಸಾಮ್ರಾಟ್ ಗೌತಮ, ವಿನಯ ಶಿಂಧೆ, ಮಲ್ಲಿಕಾರ್ಜುನ ತಾಳಿಕೋಟಿ, ರವಿ ಹೊಂಗಲ, ಸಂತೋಷ, ಕರುಣಾ ಪ್ರಶಾಂತ ಬಾನಾವಳಿಕರ, ಶಿವಾನಂದ, ಬಸವಂತಪ ಮದಲಬಾವಿ ಇವರೆಲ್ಲರೂ ಮುಖ್ಯವಾಗಿ ಆಗಮಿಸಿ ಸಹಕಾರನಗರದ ಸರಕಾರಿ ಲೈಬ್ರರಿ ಎದುರು ತೆಗೆದುಕೊಂಡಿರುವ ಈ ಸಂಸ್ಥೆಯ ಸ್ಥಳದಲ್ಲಿ 'ಲಾಡನ್ಸಿನ್ ಮೆಡಂ ತೂಸಾ ಮೂಸಿಯಾ' ದಂತೆ ಕಲೆ ಸಂಸ್ಥೆ ಸಮಾರಂಭ ಹಾಗೂ ನಾಮಕರಣ ಮಾಡಿ ಎಲ್ಲರೂ ತಮ್ಮ ಶುಭಾಷಯ ಹಾರೈಸಿದರು.

■ ಸುಮಿತಾ ಮುರಗೋಡ



## GO FOR A SAVINGS ACCOUNT THAT GIVES YOU JUMBO BENEFITS

Presenting **Star Diamond Savings Account** that lets you do more than just saving. Avail of exciting benefits such as :

• Free SMS / Phone / ATM and internet banking • Personalized Cheque Book • Free Home delivery of demand draft (courier) • Free Statement of account on demand • International Gold credit card • International debit card • Allocation of a Relationship Manager • Free RTGS/NEFT through internet banking • Free Personal air accident insurance • Free SMS alerts for debit/credit transaction • Free demat account and maintenance charges • Free stop payment of cheque • Free inward cheque return charges • Free processing charges on personal / retail loans.

Conditions apply

*Relationships beyond banking*


बैंक ऑफ़ इंडिया
Bank of India

Head Office : Star House, C - 5, 'G' Block, Bandra Kurla Complex, Bandra (East), Mumbai - 400 051.

**Visit us at www.bankofindia.co.in**

SMS “BOI<CITY>” TO 57575 e.g. “BOI MUMBAI” / Call Center 022 40919191.

Delhi Karnataka Sangha's Abhimatha Monthly,
September 2010, Price Rs.1/- RNI Regn. No. 53405/91, DL-SW-15/4016/10-11-12
Printout Date : September 8th / 9th, Postal Date :10th / 11th, Total Pages-24




Editor: Vasantha Shetty Bellare, Printed & Published by R. Renu Kumar, General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at R.V. Printing Press, C-97, Okhla Industrial Area, Phase-I, New Delhi-110020, Tel: 26815778, 40545298,